ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 17
೨೩ ಫೆಬ್ರವರಿ ೧೯೫೮
ಪುಟ ೧೦ ಬೆಲೆ: ೧೩ ನ. ಪೈಸೆ

ಸರಕಾರದ ಕಾರ್ಮಿಕ ನೀತಿ ವಿರುದ್ಧ ಪ್ರತಿಭಟನೆ

ಫೆಬ್ರವರಿ 25ರಂದು ವಿಧಾನ ಸಭೆಯ ಮುಂದೆ ಕಾರ್ಮಿಕರ ಪ್ರದರ್ಶನ

ಸರಕಾರದ ಕಾರ್ಮಿಕ ನೀತಿಯನ್ನು ವಿರೋಧಿಸುವ ಸಲುವಾಗಿ ಕರ್ನಾಟಕ ರಾಜ್ಯದಾದ್ಯಂತ ಕಾರ್ಮಿಕರು ಇದೇ ತಿಂಗಳ 23 ಮತ್ತು 25ರಂದು ಪ್ರತಿಭಟನಾದಿನವನ್ನಾಚರಿಸಲಿದ್ದಾರೆ. ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಈ ಪ್ರತಿಭಟನಾ ದಿನಾಚರಣೆಗೆ ಕರೆಯನ್ನಿತ್ತಿದೆ. ರಾಜ್ಯದಾದ್ಯಂತ ಈ ಪ್ರತಿಭಟನಾ ದಿನವನ್ನು ಯಶಸ್ವಿಗೊಳಿಸಲು ತೀವ್ರ ಸಿದ್ಧತೆ ನಡೆಯುತ್ತಿದೆ. ಫೆಬ್ರವರಿ 25ರಂದು ಬೆಂಗಳೂರಿನಲ್ಲಿ ಕಾರ್ಮಿಕರು ವಿಧಾನಸಭೆಯ ಮುಂದೆ ಪ್ರದರ್ಶನ ನಡೆಸಲು ತೀರ್ಮಾನಿಸಿದ್ದಾರೆ ಈ ಪ್ರದರ್ಶನವು ಯಶಸ್ವಿಯಾಗಲೆಂದು ಹಾರೈಸುತ್ತೇವೆ.

ಕೆ. ಪಿ. ಟಿ. ಯು. ಸಿ. ಪ್ರಕಟಣೆ

ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕೌನ್ಸಿಲ್ ಹೊರಡಿಸಿರುವ ಪ್ರಕಟಣೆಯೊಂದು, ಈ ಪ್ರತಿಭಟನಾ ದಿನ ಆಚರಿಸಲು ತೀರ್ಮಾನಿಸಿರುವುದರ ಬಗ್ಗೆ ವಿವರಣೆಯನ್ನಿತ್ತಿದೆ. ಈ ಪ್ರಕಟಣೆಯಲ್ಲಿ ಸರಕಾರವು ಇಂದು ಅನುಸರಿಸುತ್ತಿರುವ ಕಾರ್ಮಿಕ ನೀತಿಯು ಹೇಗೆ ಔದ್ಯೋಗಿಕ ಪ್ರಗತಿಗೆ, ಕೈಗಾರಿಕಾ ಶಾಂತಿಗೆ ಹಾಗೂ ಉತ್ಪಾದನೆಗೆ ಅಡ್ಡಿಯಾಗಿದೆ ಎಂಬುದನ್ನು ಎತ್ತಿ ತೋರಿಸಲಾಗಿದೆ ರಾಜ್ಯದಲ್ಲಿ ಉದ್ಭವಿಸಿರುವ ಕೈಗಾರಿಕಾ ವಿವಾದಗಳ ಬಗ್ಗೆ ಸರಕಾರವು ತಳೆದಿರುವ ಧೋರಣೆಯನ್ನು ಕಟುವಾಗಿ ಟೀಕಿಸಲಾಗಿದೆ ಪ್ರಕಟಣೆಯ ಮುಖ್ಯಾಂಶಗಳನ್ನು ಇಲ್ಲಿ ಕೊಡಲಾಗಿದೆ.

ಉತ್ಪತ್ತಿ ಹೇಗೆ ಹೆಚ್ಚಿತು

ಇಂದು ಪಂಚವಾರ್ಷಿಕ ಯೋಜನೆಯು ಬಿಕ್ಕಟ್ಟಿಗೊಳಗಾಗಿದೆ. ದೇಶದ ಔದ್ಯೋಗೀಕರಣದ ಕಾರ್ಯಕ್ರಮವು ಆಪತ್ತಿನಲ್ಲಿ ಸಿಕ್ಕಿದೆ. ಈ ಕ್ಲಿಷ್ಟ ಪರಿಸ್ಥಿತಿಯಿಂದಾಗಿ ಕಾರ್ಖಾನೆಗಳು ಬಂದಾಗುತ್ತಿದ್ದು[illegible], ಸಾಮೂಹಿಕ ವಜಾ ಮತ್ತು ನಿರುದ್ಯೋಗ ಇವುಗಳಿಗೆ ಎಡೆಕೊಡುತ್ತಿದೆ. ಈ ಪರಿಸ್ಥಿತಿಯು ವಿದೇಶೀ ವಿನಿಮಯದ ಅಭಾವದಿಂದಾಗಿಯೂ ಸರಕಾರದ ಹಣಕಾಸಿನ ನೀತಿಯಿಂದಾಗಿಯೂ ಉದ್ಭವಿಸಿದೆ.

ಈ ಪರಿಸ್ಥಿತಿಯನ್ನು ಉತ್ಪತ್ತಿಯನ್ನು ಅಧಿಕಗೊಳಿಸುವುದರಿಂದ ನಿವಾರಿಸಬಹುದು ಎಂದು ಸರಕಾರ ಹೇಳುತ್ತಿದೆ. ಕಾರ್ಮಿಕರು ಉತ್ಪತ್ತಿ ಹೆಚ್ಚು ಮಾಡಬೇಕೆನ್ನುವುದನ್ನು ವಿರೋಧಿಸಿಲ್ಲ. ಮೊದಲನೆಯ ಪಂಚವಾರ್ಷಿಕ ಯೋಜನೆಯ ಕಾಲಾವಧಿಯಲ್ಲಿ ಕಾರ್ಮಿಕರಿಂದ ಉತ್ಪತ್ತಿ ಹೆಚ್ಚಾಗಿದೆ. ಅಂಕಿ ಅಂಶಗಳಿಂದ ಇದು ಗೋಚರವಾಗುತ್ತದೆ. ಆದರೆ ಉತ್ಪತ್ತಿ ಹಾಗೂ ಲಾಭವು ಅಪಾರವಾಗಿ ಹೆಚ್ಚಿದ್ದರೂ ಕೂಡ ಕಾರ್ಮಿಕರ ಪರಿಸ್ಥಿತಿ ಮಾತ್ರ ಸುಧಾರಿಸಿಲ್ಲ. ಕಾರ್ಮಿಕರಿಗೆ ಈ ಅಧಿಕ ಉತ್ಪತ್ತಿಯಲ್ಲಿ ದೊರಕಿರುವ ಅಂಶ ಬಹಳ ಕಮ್ಮಿ ಇದೆ. ಕೈಗಾರಿಕೋತ್ಪನ್ನವನ್ನು ಅಧಿಕಗೊಳಿಸುವುದರಲ್ಲಿ ಕಾರ್ಮಿಕರು ಇಂದೂ ಆಸಕ್ತಿಯುಳ್ಳವರಾಗಿದ್ದಾರೆ. ಉತ್ಪಾದನೆ ಅಧಿಕವಾಗಬೇಕೆಂದು ಹೇಳುವ ಸರಕಾರ, ಅದೇ ಸಮಯದಲ್ಲಿ ಕಾರ್ಮಿಕರಿಗೆ ಸೌಲಭ್ಯಗಳನ್ನು ಕಲ್ಪಿಸಬೇಕು, ಹಾಗಿಲ್ಲದಿದ್ದಲ್ಲಿ ಕಾರ್ಮಿಕರಲ್ಲಿ ಉತ್ಸಾಹ ಮೂಡುವುದು ಹೇಗೆ? ಸರಕಾರ ಇಂದು ಅನುಸರಿಸುತ್ತಿರುವ ಧೋರಣೆ ಇದಕ್ಕೆ ಅನುವಾಗಿಲ್ಲ ಎಂಬುದನ್ನು ಹಲವು ನಿದರ್ಶನಗಳಿಂದ ಸ್ಪಷ್ಟಗೊಳಿಸಬಹುದು ಪ್ರಗತಿಪರವಾದ ಕಾರ್ಮಿಕ ನೀತಿಯನ್ನು ಅನುಸರಿಸುವುದರಿಂದ ಮಾತ್ರವೇ ಸರಕಾರವು ತನ್ನ ಗುರಿಯನ್ನು ಮುಟ್ಟಲು, ಕಾರ್ಮಿಕರಲ್ಲಿ ಉತ್ಸಾಹವನ್ನು ಮೂಡಿಸಲು ಸಾಧ್ಯ. ಸರಕಾರವು ಇಂದು ಅನುಸರಿಸುತ್ತಿರುವ ನೀತಿಯು ಔದ್ಯೋಗಿಕ ಪ್ರಗತಿಗೆ, ಅಧಿಕ ಉತ್ಪಾದನೆಗೆ ಅನುವಾಗಿದೆಯೇ ಎಂದು ಕೇಳಿದಲ್ಲಿ ಇಲ್ಲ ಎಂದು ಘಂಟಾಘೋಷವಾಗಿ ಹೇಳಬಹುದು.

ಕಾರ್ಮಿಕರ ಹೋರಾಟದ ಮೇಲೆ ದಬ್ಬಾಳಿಕೆ

ತಮ್ಮ ನ್ಯಾಯವಾದ ಬೇಡಿಕೆಗಳಿಗಾಗಿ ಹೋರಾಡುತ್ತಿರುವ ಕಾರ್ಮಿಕರ ಮೇಲೆ, ಟ್ರೇಡ್ ಯೂನಿಯನ್ ಕಾರ್ಯಕರ್ತರುಗಳ ಮೇಲೆ ಸರಕಾರವು ದಬ್ಬಾಳಿಕೆ ನಡೆಸುವ ನೀತಿಯನ್ನನುಸರಿಸುತ್ತಿದೆ. ಬೆಂಗಳೂರಿನ ವಿಮಾನ ಕಾರ್ಖಾನೆ ನೌಕರರ ಸತ್ಯಾಗ್ರಹ ಚಳವಳಿಯನ್ನು ಹತ್ತಿಕ್ಕಲು ಸರಕಾರ ದಬ್ಬಾಳಿಕೆಯ ಅಸ್ತ್ರಪ್ರಯೋಗಿಸಿತು. 144ನೇ ಸೆಕ್ಷನ್ ಜಾರಿಗೆ ತಂದಿತು. 80 ಜನಕ್ಕೂ ಹೆಚ್ಚು ಕಾರ್ಮಿಕರ ಮೇಲೆ, ಸಂಘದ ಮುಂದಾಳುಗಳ ಮೇಲೆ ಪೋಲೀಸು ಕೇಸುಗಳನ್ನು ಹಾಕಲಾಗಿದೆ

ಬೆಂಗಳೂರು, ಕೊಡಗು, ಮಂಗಳೂರು, ದಾವಣಗೆರೆ ಪ್ಲಾಂಟೇಷನ್‌ಗಳು, ಮುಂತಾದ ಕಡೆಗಳಲ್ಲಿ ಟ್ರೇಡ್ ಯೂನಿಯನ್ ಕಾರ್ಯಕರ್ತರುಗಳ ಮೇಲೆ ಹಲವಾರು ಪೋಲೀಸ್ ಕೇಸುಗಳನ್ನು ಹಾಕಲಾಗಿದೆ. ಸಾಮಾನ್ಯ ಟ್ರೇಡ್ ಯೂನಿಯನ್ ಚಟುವಟಿಕೆಯನ್ನು ನಡೆಸಿಕೊಂಡು ಹೋಗುವುದೂ, ಸಂಘದ ದಿನನಿತ್ಯದ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗುವುದು ಸರಕಾರದ ಈ ದಬ್ಬಾಳಿಕೆ ನೀತಿಯಿಂದ ಪ್ರಯಾಸವಾಗಿದೆ. ಸರಕಾರವು ಕೂಡಲೇ ತನ್ನ ದಬ್ಬಾಳಿಕೆಯ ನೀತಿಯನ್ನು ನಿಲ್ಲಿಸಿ, ಟ್ರೇಡ್ ಯೂನಿಯನ್ ವ್ಯವಹಾರಗಳಲ್ಲಿ ಪೋಲೀಸು ಪ್ರವೇಶಿಸಕೂಡದೆಂದು ಒತ್ತಾಯಪಡಿಸುವುದಗತ್ಯವಾಗಿದೆ.

ವಿವಾದಗಳು ಬಗೆಹರಿದಿಲ್ಲ

ವಿಮಾನ ಕಾರ್ಖಾನೆ ನೌಕರರ ವಿವಾದವು ಬಗೆಹರಿಯದೇ ಹಾಗೆಯೇ ಉಳಿದಿದೆ. ಸರಕಾರದ ಮತ್ತು ಮ್ಯಾನೇಜ್‌ಮೆಂಟಿನ ದಬ್ಬಾಳಿಕೆಯಿಂದಾಗಿ, ಈಗಾಗಲೇ 15 ಮಂದಿ ಸಂಘದ ಪ್ರಮುಖರು ವಜಾ ಮಾಡಲ್ಪಟ್ಟಿದ್ದಾರೆ. ನೌಕರರ ನಡುವೆ ಅತೃಪ್ತಿ ಹೆಚ್ಚಿದೆ. ಪರಿಸ್ಥಿತಿಯು ತೀರಾ ಹದಗೆಟ್ಟಿದೆ ಈ ಕೈಗಾರಿಕೆಯಲ್ಲಿ.

ಹತ್ತಿ ಗಿರಣಿ ಕೈಗಾರಿಕೆಯಲ್ಲಿ ರಿಟ್ರೆಂಚ್‌ಮೆಂಟ್ ಆರಂಭವಾಗಿ, ಅಶಾಂತಿ ಹಬ್ಬಿದೆ. ಸಿಲ್ಕ್ ಕೈಗಾರಿಕೆಯಲ್ಲಿ ನಿರಂತರ ಬಿಕ್ಕಟ್ಟು ಒದಗಿದೆ. ಫ್ಯಾಕ್ಟರಿಗಳನ್ನು ಮುಚ್ಚುವುದು ದಿನನಿತ್ಯದ ಮಾತಾಗಿದೆ. ಕಾರ್ಮಿಕರಿಗೆ ಕೆಲಸದ ಭದ್ರತೆಯೇ ಇಲ್ಲವಾಗಿದೆ.

ಗೇರುಬೀಜ ಕಾರ್ಖಾನೆಗಳನ್ನು ನಾನ್ ಸೀಸನಲ್ ಎಂದು ಸಾರಬೇಕೆಂದು ಮದ್ರಾಸು ಸರಕಾರ ತೀರ್ಮಾನಿಸಿದ್ದರೂ ಮೈಸೂರು ಸರಕಾರದವರು ಇನ್ನೂ ಮಾಡಿಲ್ಲ. ಇದರಿಂದಾಗಿ ಗೇರುಬೀಜ ಕೈಗಾರಿಕೆಯಲ್ಲಿ ದುಡಿಯುತ್ತಿರುವ ಸಹಸ್ರಾರು ಮಂದಿ ಕೆಲಸಗಾರರಿಗೆ ಕೆಲಸದ ಭದ್ರತೆ ಇಲ್ಲವಾಗಿದೆ. ಸರಕಾರವು ಕೂಡಲೇ ಈ ಕೈಗಾರಿಕೆಯನ್ನು ನಾನ್ ಸೀಸನಲ್ ಎಂದು ಘೋಷಿಸಬೇಕು.

ಕೋಲಾರದ ಚಿನ್ನದ ಗಣಿ ರಾಷ್ಟ್ರೀಕರಣವನ್ನು ಎಲ್ಲರೂ ಸ್ವಾಗತಿಸಿದರು. ಕಾರ್ಮಿಕರು ಉತ್ಸಾಹದಿಂದ ಅದನ್ನು ಸ್ವಾಗತಿಸಿದರು. ಆದರೆ ಕಾರ್ಮಿಕರಲ್ಲಿ ಇಂದು ಅತೃಪ್ತಿ ಮೂಡಿದೆ. ಅವರ ಬೋನಸ್ ಪ್ರಶ್ನೆ ಇನ್ನೂ ವರೆಗೆ ಇತ್ಯರ್ಥವಾಗಿಲ್ಲ.

1953—54 ಸಾಲಿನ ಬೋನಸ್ ಪ್ರಶ್ನೆ ಈವರೆಗೆ ಇತ್ಯರ್ಥವಾಗಿಲ್ಲ. ರಾಷ್ಟ್ರೀಕರಣಕ್ಕೆ ಹಿಂದಿನ ವರ್ಷದ ಪ್ರಶ್ನೆ ಇದು. ಸರಕಾರವು ಟ್ರಿಬ್ಯೂನಲ್ ಎವಾರ್ಡಿನ ವಿರುದ್ಧವಾಗಿ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಿದೆ. ಕಳೆದ 4 ವರ್ಷಗಳಿಂದ ಕೆಲಸಗಾರರ ಬೋನಸ್ ಪ್ರಶ್ನೆ ಇತ್ಯರ್ಥವಾಗಿಲ್ಲ. 1955, 56, 57ರ ಬೋನಸ್ ಪ್ರಶ್ನೆಯನ್ನು ಸುಪ್ರೀಂ ಕೋರ್ಟಿನ ತೀರ್ಪಿಗಾಗಿ ಕಾಯಲಾಗುತ್ತಿದೆ. ಭೂಗರ್ಭದಲ್ಲಿ ಶ್ರಮವಹಿಸಿ ದುಡಿಯುವ ಕಾರ್ಮಿಕರಿಗೆ ವರ್ಷವರ್ಷ ಬರುತ್ತಿದ್ದ ಬೋನಸ್ ಕಳೆದ ನಾಲ್ಕು ವರ್ಷಗಳಿಂದ ಸಿಕ್ಕದಿದೆ. ಹೀಗಾದಲ್ಲಿ ಕಾರ್ಮಿಕರ ನಡುವೆ ಅತೃಪ್ತಿ, ನಿರುತ್ಸಾಹ ಮೂಡದಿದ್ದೀತೆ? ಉತ್ಪಾದನೆಯು ಈ ನೀತಿಯಿಂದ ಹೆಚ್ಚೀತೆ?

ಸರಕಾರವು ಹೊಸ ಬೋನಸ್ ನೀತಿಯೊಂದನ್ನು ಮುಂದಿರಿಸಿದೆ. ಅದು ಸರಕಾರಿ ಉದ್ಯಮಗಳಲ್ಲಿ ದುಡಿಯುವ ಕೆಲಸಗಾರರಿಗೆ ಬೋನಸ್ ಕೊಡಲಾಗುವುದಿಲ್ಲ ಎಂದು. ಈಗಾಗಲೇ, ಹಿಂದುಸ್ತಾನ್ ವಿಮಾನ ಕಾರ್ಖಾನೆ, ಭಾರತ್ ಎಲೆಕ್ಟ್ರಾನಿಕ್ಸ್, ಹಿಂದೂಸ್ತಾನ್ ಮೆಷಿನ್ ಟೂಲ್ಸ್, ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್, ಮೈಸೂರು ಸರ್ಕಾರ ರೋಡ್ ಟ್ರಾನ್ಸ್‌ಪೋರ್ಟ್‌ಗಳಲ್ಲಿ ಈ ನೀತಿಯನ್ನು ಜಾರಿಗೆ ತರಲಾಗಿದೆ. ಮೈಸೂರು ಸರಕಾರ ಈ ನೀತಿಯನ್ನು ಅನುಸರಿಸಿ, ಕಾರ್ಮಿಕರಿಗೆ ಬೋನಸ್ಸನ್ನು ನಿರಾಕರಿಸಿದ್ದರೆ, ಕೇರಳ ಸರಕಾರವು ಬೋನಸ್ಸಿನ ಬಗ್ಗೆ ಸ್ಪಷ್ಟವಾದ ನೀತಿಯೊಂದನ್ನು ಅನುಸರಿಸುತ್ತಿದೆ. ಸರಕಾರಿ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ನಷ್ಟ ಸಂಭವಿಸಿದಾಗ್ಯೂ ಸಹ ವರ್ಷಕ್ಕೆ ಕನಿಷ್ಟ 15 ದಿನ ವೇತನವನ್ನು ಬೋನಸ್ಸಾಗಿ ಕೊಡಬೇಕೆಂದು ತೀರ್ಮಾನಿಸಿದೆ.

ಹೀಗೆ, ಸರಕಾರದ ಇಂದಿನ ಕಾರ್ಮಿಕ ನೀತಿಯನ್ನು ಕುರಿತು ನಿದರ್ಶನವನ್ನೀಯುತ್ತ ಹೋದಲ್ಲಿ ದೊಡ್ಡ ಪಟ್ಟಿಯನ್ನೇ ತಯಾರಿಸಬಹುದಾಗಿದೆ.

ಮಂದಗತಿಯಿಂದ ಸಾಗುವ ಆಡಳಿತ ಯಂತ್ರ

ಸರಕಾರದ ಆಡಳಿತ ಯಂತ್ರವು ಬಹು ಮಂದಗತಿಯಿಂದ ಸಾಗುತ್ತಿದೆ. ಕಾರ್ಮಿಕರ ವಿವಾದಗಳನ್ನು ಇತ್ಯರ್ಥಗೊಳಿಸಲು ತ್ರಿಪಕ್ಷ ಸಮ್ಮೇಳನಗಳ ಮೂಲಕ, ಸಂಧಾನದ ಮೂಲಕ, ಮಾಡಲು ಸರಕಾರ ಯತ್ನಿಸಿಲ್ಲ. ಕಾರ್ಮಿಕರ ಕೂಲಿ ನಿಗದಿಗೊಳಿಸುವ ಬಗ್ಗೆ ಸರಕಾರಕ್ಕೆ ಸ್ಪಷ್ಟವಾದ ಧೋರಣೆಯಿಲ್ಲ. ವಿವಿಧ ಕೈಗಾರಿಕೋ

(೧೦ನೇ ಪುಟ ನೋಡಿ)

ರಾಷ್ಟ್ರೀಯ - ಅಂತರ ರಾಷ್ಟ್ರೀಯ ★ ಸಿ. ಆರ್. ಕೆ.

ಜೋರ್ಡಾನ್ - ಇರಾಕ್ ಒಕ್ಕೂಟ

ಈಜಿಪ್ಟ ಮತ್ತು ಸಿರಿಯಾ ರಾಷ್ಟ್ರಗಳು ಒಂದುಗೂಡಿ ಸಂಯುಕ್ತ ಅರಬ್ ಗಣತಂತ್ರ ಉತ್ಪವಿಸಿ, ಮಧ್ಯಪ್ರಾಚ್ಯದಲ್ಲಿ ಮಹತ್ತರವಾದ ಬದಲಾವಣೆ ತಂದಿದೆ. ಸಾಮ್ರಾಜ್ಯಶಾಹಿಗಳ ವಿರೋಧವಾಗಿ ತನ್ನ ಸ್ವಾತಂತ್ರ್ಯ ಸಾರ್ವಭೌಮತ್ವಗಳನ್ನು ಕಾಪಾಡಿಕೊಳ್ಳುವುದೇ ಈ ಒಕ್ಕೂಟದ ಉದ್ದೇಶವಾಗಿದೆಯೆಂದು ಹೇಳಬಹುದು. ಈ ಒಕ್ಕೂಟದೊಳಕ್ಕೆ ಯೆಮೆರ್ನ ರಾಜ್ಯವೂ ಸಹ ಸೇರಿಕೊಳ್ಳುವುದು. ಅದರ ಬಗ್ಗೆ ಮಾತುಕತೆಗಳು ನಡೆಯುತ್ತಿವೆ. ಈ ಒಕ್ಕೂಟದ ಬಗ್ಗೆ ಪ್ರಜಾಭಿಪ್ರಾಯ ಪಡೆಯಲು, ಪ್ಲೆಬಿಸೈಟ್ ನಡೆಸಲು ಈಜಿಪ್ಟ-ಸಿರಿಯಾಗಳಲ್ಲಿ ಸಿದ್ಧತೆ ನಡೆಯುತ್ತಿದೆ. ಸಾಮ್ರಾಜ್ಯಶಾಹಿ ಭಂಟರು ಈ ಪ್ಲೆಬಿಸೈಟಗೆ ಆತಂಕ ತರಲು ಯತ್ನಿಸುತ್ತಿದ್ದಾರೆಂದು ತಿಳಿದು ಬಂದಿದೆ ಈಗಾಗಲೇ ಹಲವು ಬಂಧನಗಳಾಗಿವೆ.

ಒಂದೆಡೆ ಈ ಒಕ್ಕೂಟವು ರೂಪುಗೊಳ್ಳುತ್ತಿರುವಲ್ಲಿ ಸಾಮ್ರಾಜ್ಯವಾದಿಗಳ ಕೈಗೊಂಬೆ ರಾಷ್ಟ್ರಗಳಾದ ಜೋರ್ಡಾನ್ ಮತ್ತು ಇರಾಕ್‌ಗಳು ಒಪ್ಪಂದಕ್ಕೆ ಬಂದು ತಾವೂ ಸಹ ಅರಬ್ ರಾಷ್ಟ್ರಗಳ ಐಕ್ಯತೆಗಾಗಿ ದುಡಿಯುತ್ತಿರುವುದಾಗಿಯೂ ಅದಕ್ಕಾಗಿ ಪ್ರಥಮ ಹೆಜ್ಜೆಯಾಗಿ ಈ ಎರಡು ರಾಷ್ಟ್ರಗಳ ಒಕ್ಕೂಟ ಏರ್ಪಟ್ಟಿದೆಯೆಂದೂ ಘೋಷಿಸಲಾಗಿದೆ. ಈ ಎರಡೂ ರಾಜ್ಯಗಳು ನಿರಂಕುಶ ಪ್ರಭುತ್ವಗಳು. ಇರಾಕ್ ಮಧ್ಯ ಪ್ರಾಚ್ಯ ರಕ್ಷಣಾ ಕೂಟದ ಸದಸ್ಯನಾಗಿದೆ. ಸಾಮ್ರಾಜ್ಯಶಾಹಿಗಳ ಮಧ್ಯ ಪ್ರಾಚ್ಯದಲ್ಲಿ ನೆಲೆಯಾಗಿರುವ ಈ ರಾಜ್ಯಗಳು ಒಂದುಗೂಡಿರುವುದಾಗಿ ಘೋಷಿಸಲಾಗಿದ್ದರೂ, ಜನಾಭಿಪ್ರಾಯವನ್ನು ಮಾತ್ರ ಗಣನೆಗೆ ತೆಗೆದುಕೊಂಡಿಲ್ಲ. ಮುಂದೆಯಾದರೂ ತೆಗೆದುಕೊಳ್ಳುವ ಸೂಚನೆಯಿಲ್ಲ. ಈಜಿಪ್ಟ ಸಿರಿಯಾಗಳ ಒಕ್ಕೂಟಕ್ಕೆ ಪ್ರತಿಯಾಗಿ ಈ ಒಕ್ಕೂಟ ಸ್ಥಾಪಿತವಾಗಿದೆ ಅಷ್ಟೆ. ಜನತೆಯ ಬೆಂಬಲ ಆದರಗಳನ್ನು ಪಡೆಯದಿರುವ ಈ ಒಕ್ಕೂಟವು ಶೀಘ್ರವಾಗಿ ಮುರಿದು ಬೀಳುವುದರಲ್ಲಿ ಸಂಶಯವಿಲ್ಲ.

ಇಂಡೋನೇಷಿಯದಲ್ಲಿ ಪ್ರತಿ ಸರಕಾರ

ಇಂಡೋನೇಷಿಯದ ಮಧ್ಯ ಸುಮಾತ್ರಾದಲ್ಲಿ ಲೆಫ್ಟಿನೆಂಟ್ ಕರ್ನಲ್ ಹುಸೇನರವರ ನೇತೃತ್ವದಲ್ಲಿ ದಂಗೆಕಾರರು ಕೇಂದ್ರ ಸರಕಾರದ ವಿರುದ್ಧವಾಗಿ ಪ್ರತಿ ಸರ್ಕಾರವೊಂದನ್ನು ರಚಿಸಿದ್ದಾರೆ. ಈಗಿರುವ ಜನಾಂಗ ಸರ್ಕಾರವು ಅಧಿಕಾರ ತ್ಯಜಿಸಬೇಕೆಂದು, ಮಾಜೀ ಉಪಾಧ್ಯಕ್ಷ ಡಾ|| ಮಹಮ್ಮದ್ ಹಟ್ಟಾ ಮತ್ತು ಜಕಾರ್ತಾದ ಸುಲ್ತಾನರು ಹೊಸ ಸರಕಾರ ರಚಿಸಬೇಕೆಂದೂ ಅದು ಘೋಷಿಸಿದೆ.

ಕೇಂದ್ರ ಸರಕಾರವು ದಂಗೆಕೋರರ ಈ ಪ್ರತಿ ಸರ್ಕಾರದ ಮೇಲೆ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದೆ.

ಶೃಂಗ ಸಮ್ಮೇಳನ

ಅಂತರರಾಷ್ಟ್ರೀಯ ಬಿಕ್ಕಟ್ಟಿನ ವಾತಾವರಣವನ್ನು ಸಡಿಲಿಸುವ ಉದ್ದಿಶ್ಯದಿಂದ ವಿವಾದಾಸ್ಪದವಾದ ವಿಷಯಗಳನ್ನು ಕುರಿತು ಶೃಂಗ ಸಮ್ಮೇಳನ ನಡೆಯಬೇಕೆಂದು ಎಲ್ಲ ರಾಷ್ಟ್ರಗಳೂ ಸಾಮಾನ್ಯವಾಗಿ ಒಪ್ಪಿಕೊಂಡಿವೆ ಇಂಥ ಸಲಹೆಯನ್ನು ಸೋವಿಯತ್ ಸರಕಾರ ಮೇಲಿಂದ ಮೇಲೆ ಮಂಡಿಸುತ್ತ ಬಂದಿದೆ. ಅಮೆರಿಕ, ಬ್ರಿಟನ್ ಮತ್ತು ಫ್ರಾನ್ಸಗಳು ಇಂಥ ಒಂದು ಸಮಾವೇಶ ನಡೆಯುವುದು ಅಗತ್ಯವೆಂದು ಒಪ್ಪಿಕೊಂಡಿದ್ದರೂ ಕೂಡ ಇಲ್ಲ ಸಲ್ಲದ ಅಡ್ಡಿ ಆತಂಕಗಳನ್ನು ತಂದೊಡ್ಡುತ್ತಿವೆ.

ಶೃಂಗ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ವಿದೇಶಾಂಗ ಸಚಿವರ ಸಮಾವೇಶವಾಗಬೇಕು, ಜರ್ಮನಿಯ ಪುನರೈಕ್ಯತೆಯ ಬಗ್ಗೆ ಚರ್ಚೆಯಾಗಬೇಕು ಮುಂತಾಗಿ ವಾದಗಳು ಮುಂದಿಡಲಾಗುತ್ತಿದೆ. ಇಷ್ಟೆಲ್ಲ ಅಡ್ಡಿ ಆತಂಕಗಳಿದ್ದಾಗ್ಯೂ ಸಹ, ಶೃಂಗ ಸಮ್ಮೇಳನವು ಸೇರುವುದಂತೂ ಖಚಿತವಾಗುತ್ತ ಬಂದಿದೆ. ಆದರೆ ಇದು ಎಂದು ಸೇರುವುದು ಎಂಬುದು ಸಂದೇಹಾಸ್ಪದವಾಗಿದೆ.

ಭಾರತದಲ್ಲಿ ಅಫ್ಘಾನ ದೊರೆ ಪ್ರವಾಸ

ಭಾರತದ ನೆರೆ ರಾಷ್ಟ್ರವಾದ ಆಫ್ಘನಿಸ್ಥಾನದ ದೊರೆ ಮಹಮ್ಮದ್ ಜಾಹಿರ್ ಷಾರವರು ಭಾರತದಲ್ಲಿ ಪ್ರಸ್ತುತ ಪ್ರವಾಸ ಮಾಡುತ್ತಿದ್ದಾರೆ ಆಫ್ಘನಿಸ್ಥಾನವು ಭಾರತ ದೇಶದಂತೆಯೇ ತಾಟಸ್ಥ್ಯ ನೀತಿಯನ್ನು ಶಾಂತಿಯುತವಾದ ವಿದೇಶಾಂಗ ನೀತಿಯನ್ನು ಅನುಸರಿಸುತ್ತಿದೆ.

ಪಂಡಿತ ನೆಹರೂರವರೊಂದಿಗೆ ಕೂಡಿ ಹೊರಡಿಸಿರುವ ಜಂಟಿ ಹೇಳಿಕೆಯಲ್ಲಿ ಜಾಹಿರ್ ಷಾರವರು ಅಂತರರಾಷ್ಟ್ರೀಯ ಬಿಕ್ಕಟ್ಟಿನ ವಾತಾವರಣವನ್ನು ಸಡಿಲಗೊಳಿಸಲು ಹಾಗೂ ವಿಶ್ವಶಾಂತಿ ನೆಲೆಸಲು ಸಾಧುವಾಗುವಂತೆ ಮಾಡಲು ಶೃಂಗ ಸಮ್ಮೇಳನವು ಆದಷ್ಟು ಶೀಘ್ರವಾಗಿ ನಡೆಯಬೇಕೆಂದು ಘೋಷಿಸಿದ್ದಾರೆ. ಅಣು ಶಸ್ತ್ರಾಸ್ತ್ರಗಳ ಪ್ರಯೋಗಗಳು ಕೂಡಲೇ ನಿಲ್ಲಬೇಕೆಂದು ಹೇಳಲಾಗಿದೆ. ಅಲ್ಲದೆ ನೂತನವಾಗಿ ಉದಯಿಸಿರುವ ಅರಬ್ ಗಣತಂತ್ರವನ್ನು ಸ್ವಾಗತಿಸಿ, ಶಾಂತಿ ಸ್ಥಾಪನೆಗೆ ಈ ರಾಷ್ಟ್ರ ದುಡಿಯುವುದೆಂದು ನಂಬಿಕೆಯನ್ನು ವ್ಯಕ್ತಪಡಿಸಲಾಗಿದೆ.

ಜಾಹಿರ್ ಷಾರವರು ತಮ್ಮ ಪ್ರವಾಸ ಕಾಲದಲ್ಲಿ ಬೆಂಗಳೂರಿಗೆ ಇದೇ ತಿಂಗಳ ೨೦ರಂದು ಭೇಟಿ ಕೊಡಲಿದ್ದಾರೆ.

ಸೋವಿಯತ್ ಪಾರ್ಲಿಮೆಂಟರಿ ನಿಯೋಗದ ಪ್ರವಾಸ

ಸೋವಿಯತ್ ರಷ್ಯಾದ ಪಾರ್ಲಿಮೆಂಟರಿ ನಿಯೋಗವೊಂದು ಭಾರತ ಪಾರ್ಲಿಮೆಂಟಿನ ಆಹ್ವಾನದ ಮೇಲೆ ಭಾರತದಲ್ಲಿ ಪ್ರವಾಸ ಮಾಡುತ್ತಿದೆ. ಸೋವಿಯತ್ ಪಾರ್ಲಿಮೆಂಟರಿ ನಿಯೋಗವೊಂದು ಭಾರತಕ್ಕೆ ಭೇಟಿಯಿಯಾಯುತ್ತಿರುವುದು ಇದೇ ಮೊದಲ ಬಾರಿ.

ಈ ನಿಯೋಗವು ಭಾರತದಲ್ಲಿ ಮೂರು ವಾರಗಳ ಕಾಲ ಪ್ರವಾಸ ನಡೆಸುವುದು. ನಿಯೋಗವು ಬೆಂಗಳೂರಿಗೆ ಇದೇ ತಿಂಗಳ ೨೪ರಂದು ಆಗಮಿಸಲಿದೆ. ನಿಯೋಗವು ಸುಪ್ರೀಂ ಸೋವಿಯತ್ತಿನ ಅಧ್ಯಕ್ಷ ಮಂಡಲದ ಸದಸ್ಯರಾದ ಪಾವೆಲ್ ಲೋಬನೋವ್‌ರವರ ನಾಯಕತ್ವದಲ್ಲಿ ಆಗಮಿಸಿದೆ.

ಈ ಪಾರ್ಲಿಮೆಂಟರಿ ನಿಯೋಗವು ನೀಡುತ್ತಿರುವ ಭೇಟಿಯು ಸೋವಿಯತ್ ಮತ್ತು ಭಾರತ ಜನತೆಗಳ ನಡುವೆ ಹೆಚ್ಚು ಬಲಯುತವಾದ ಮೈತ್ರಿಯನ್ನು ನಿರ್ಮಿಸಲು ಸಹಾಯಕವಾಗುವುದರಲ್ಲಿ ಸಂದೇಹವಿಲ್ಲ. ನಿಯೋಗದ ಪ್ರವಾಸವು ಎಲ್ಲ ರೀತಿಯಲ್ಲಿಯೂ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

ರೈಲ್ವೆ ಆಯ-ವ್ಯಯ ಪಟ್ಟಿ

1958—59ರ ಸಾಲಿನ ರೈಲ್ವೆ ಆಯವ್ಯಯ ಪಟ್ಟಿಯು ಲೋಕ ಸಭೆಯಲ್ಲಿ ಮಂಡಿತವಾಗಿದೆ. ಈ ವರ್ಷದಲ್ಲಿ ಯಾವ ಹೊಸ ಬದಲಾವಣೆಯನ್ನೂ ಮಾಡಲಾಗಿಲ್ಲ. ರೈಲ್ವೆ ಸಾಗಾಣಿಕೆ ದರಗಳ ಮಟ್ಟದಲ್ಲಿ ಬದಲಾವಣೆಯನ್ನು ಮುಂದೆ ಘೋಷಿಸಲಾಗುವುದು.

ಕಳೆದ ಸಾಲಿನಲ್ಲಿ ರೈಲ್ವೆಯು ರೂಪಾಯಿ 27 3 ಕೋಟಿಗಳ ನಿವ್ವಳ ಲಾಭವನ್ನು ಸಂಪಾದಿಸಿದೆ. ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ನಿವ್ವಳ ಲಾಭವು 27 34 ಕೋಟಿಗಳಾಗಬಹುದೆಂದು ನಿರೀಕ್ಷಿಸಲಾಗಿದೆ. ರೈಲ್ವೆ ಅಭಿವೃದ್ಧಿ ಕಾರ್ಯವು ಅಷ್ಟು ತೀವ್ರಗತಿಯಿಂದ ಕಳೆದ ವರ್ಷ ಸಾಗಲಿಲ್ಲವೆಂದು ಹೇಳಲಾಗಿದೆ. ಮುಂದೆ ಈ ಕಾರ್ಯವನ್ನು ಹೆಚ್ಚಗೊಳಿಸುವುದಾಗಿ ಸೂಚನೆಯಿಯಾಯಲಾಗಿದೆ.

ಈ ಬಾರಿಯ ಆಯ-ವ್ಯಯ ಪಟ್ಟಿಯಲ್ಲಿ ಯಾವ ಹೆಚ್ಚುವರಿಯಾಗಲಿ ಅಥವಾ ರಿಯಾಯಿತಿಗಳಾಗಲೀ ಇಲ್ಲದಿರುವುದರಿಂದ ಇದರ ಬಗ್ಗೆ ಅಷ್ಟು ಹೆಚ್ಚಿನ ಉತ್ಸಾಹ ವಾತಾವರಣವಿಲ್ಲವೆಂದು ವರದಿಗಳು ತಿಳಿಸಿವೆ. —19-2-58

ತಾತಾರಿಂದ ಕಾಂಗ್ರೆಸ್ ನಿಧಿಗೆ ರೂ. 10 ಲಕ್ಷ 30 ಸಾವಿರ. ಸಹಾಯ ಧನ

1956-57ನೇ ಸಾಲಿನಲ್ಲಿ ತಾತಾ ಅಯರ್ನ ಮತ್ತು ಸ್ಟೀಲ್ ಕಂಪೆನಿಯು ಕಾಂಗ್ರೆಸ್ಸಿಗೆ ಒಟ್ಟು ರೂ. 10,30,000ದಷ್ಟು ಸಹಾಯಧನವಿತ್ತಿದೆ ಎಂದು ಡೈರೆಕ್ಟರರ ವರದಿಯಲ್ಲಿ ಹೇಳಲಾಗಿದೆ.

ಈ ಕೆಳಗಿತ್ತ ರೀತಿಯಲ್ಲಿ ತಾತಾ ಕಂಪೆನಿಯು ಕಾಂಗ್ರೆಸ್ ನಿಧಿಗೆ ಹಣ ಸುರಿದಿದೆ.

ಕೇಂದ್ರ ನಿಧಿ	 6,00,000
ಬಿಹಾರ ಪ್ರದೇಶ ಕಾಂಗ್ರೆಸ್ ಸಮಿತಿ	 3,30,000
ಒರಿಸ್ಸಾ ಪ್ರದೇಶ ಕಾಂಗ್ರೆಸ್ ಸಮಿತಿ	 1,00,000

ಓದುಗರ ಓಲೆ

ಗೃಹಕೈಗಾರಿಕೆ ನಿಧಿ ಕಾಂಗ್ರೆಸ್ಸಿಗರ ಜೇಬಿಗೆ !

ಭದ್ರಾವತಿ ತಾಲೂಕು ವಿಶ್ವೇಶ್ವರಯ್ಯ ಸ್ಕೀಮ್ ಸೊಸೈಟಿಯಲ್ಲಿ ಗೃಹಕೈಗಾರಿಕೆಗೆ ಪ್ರೋತ್ಸಾಹಕ್ಕಾಗಿ ಇಂದಿನವರೆಗೂ 8000 ಕ್ಕೂ ಮಿಕ್ಕಿ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿರುತ್ತಾರೆ. ಸಾಲಕೊಟ್ಟಿರುವ ಹಣದ ಅಂಕಿಅಂಶ, 3000 ರೂ, 2000 ರೂ., 1500 ರೂ., 1000 ರೂ., 500 ರೂ., 300 ರೂ., 250 ರೂ, 100 ರೂಪಾಯಿ ಹೀಗಿರುತ್ತದೆ. ಆದರೆ ಈ ರೀತಿಯಾಗಿ ಸರಕಾರದಿಂದ ಹಣವನ್ನು ತರಿಸಿ ಕಡಿಮೆ ಬಡ್ಡಿ ದರದಲ್ಲಿ ಹಂಚಿದ ಹಣ ಸರಿಯಾದ ರೀತಿಯಲ್ಲಿ ವಿನಿಯೋಗವಾಗುತ್ತಿದೆಯೇ ಎಂಬುದು ಮುಖ್ಯವಾದ ಪ್ರಶ್ನೆ.

ಜನ್ನಾಪುರದ ನ್ಯೂ ಟೌನ್ ಕಾಂಗ್ರೆಸ್ ಮಂಡಲದ ಅಧ್ಯಕ್ಷರೂ ಸಹ ಇದೇ ಸೊಸೈಟಿಯಿಂದ 2,500 ರೂಪಾಯಿ ಸಾಲವನ್ನು ಮರಗೆಲಸದ ಕೈಗಾರಿಕೆಗೆಂದು ಪಡೆದಿದ್ದಾರೆ ಇವರು ಮೊದಲಿನಿಂದಲೂ ಕಂಟ್ರಾಕ್ಟರ್ ಆದ್ದರಿಂದ ಮನೆಯಲ್ಲಿ ಬೇಕಾದಷ್ಟು ಮರಗಳು ಬಿದ್ದಿವೆ. ಮರಗೆಲಸದ ಅಭಿವೃದ್ಧಿಗೆಂದು ಹೇಳಿಕೊಂಡು ತೆಗೆದುಕೊಂಡ ಹಣದಿಂದ ಮರಗೆಲಸವನ್ನು ಪ್ರಾರಂಭಿಸಿಲ್ಲವೆಂದೂ ಬೇರೆ ಉದ್ದೇಶಕ್ಕಾಗಿ ಬಳಸಿಕೊಂಡಿದ್ದಾರೆಂದೂ ತಿಳಿದು ಬಂದಿದೆ. ಇನ್ನೂ ಅನೇಕರು ಇದೇ ಸೊಸೈಟಿಯಿಂದ 6¼%ನಂತೆ ಸಾಲಪಡೆದು, 12½%ನಂತೆ ಹೊರಗಡೆ ಸಾಲ ಕೊಟ್ಟಿದ್ದಾರೆಂದೂ ತಿಳಿದುಬಂದಿದೆ. ಇಟ್ಟಿಗೆ ಸುಡುವ ಕೈಗಾರಿಕೆಗೆಂದು ಸಾಲಪಡೆದು ಮನೆಕಟ್ಟಿಸಿ ಕೊಂಡಿದ್ದಾರೆಂದು ಗೊತ್ತಾಗಿದೆ.

ಮತ್ತೊಬ್ಬ ಕಾಂಗ್ರೆಸ್ ಪುಢಾರಿಗಳು ಇದೇ ಸೊಸೈಟಿಯಿಂದ 3000 ರೂಪಾಯಿಗಳನ್ನು ಗಾಡಿ ಕಾರ್ಖಾನೆಗೆಂದು ಪಡೆದು ಭದ್ರಾವತಿ ಸ್ಟೀಲ್ ಕಂಟ್ರೋಲರ್‌ರವರಿಂದ ಹಲವಾರು ಟನ್ನು ಕಬ್ಬಿಣವನ್ನು, ಪರ್‌ಮಿಟ್ ಮೂಲಕ ಪಡೆದು ಟನ್ನಿಗೆ 5 ರೂಪಾಯಿಯಂತೆ ಜಾಸ್ತಿ ಬೆಲೆಗೆ ಮಾರಿ, ಬ್ಲ್ಯಾಕ್‌ಮಾರ್ಕೆಟ್ಟಿನಲ್ಲಿ ಲಾಭ ತಿನ್ನುತ್ತಿದ್ದಾರೆ.

ಸಿರಿಯೂರು ಗ್ರಾಮದವರೊಬ್ಬರು ಮರಗೆಲಸ ಕೈಗಾರಿಕೆಗೆಂದು 2000 ರೂಪಾಯಿಗಳನ್ನು ಸಾಲಪಡೆದಿದ್ದಾರೆ. ಆದರೆ ಯಾವ ಕೈಗಾರಿಕೆಯನ್ನು ಪ್ರಾರಂಭಿಸಿಲ್ಲ. ಹೀಗೆ 2000 ರೂಪಾಯಿಗಳನ್ನು ಸಾಲ ಪಡೆದ ಮೇಲೆ ಇದೇ ಊರಿನ ಒಬ್ಬ ಕಾಂಗ್ರೆಸ್ ಮುಖಂಡರು ಒಂದು ಕಾರನ್ನು ಕೊಂಡಿದ್ದಾರೆಂದೂ ಅವರು M. P. C. C. ಮೆಂಬರೆಂದೂ ಅಂತೆ ಕಂತೆ ಮಾತನಾಡುತ್ತಿರುತ್ತಾರೆ ಎಂದು ಗೊತ್ತಾಗಿದೆ. ಇದೇ ರೀತಿ ಅನೇಕ ಅನ್ಯಾಯಗಳೂ ಸರಕಾರದ ಹಣದ ದುರುಪಯೋಗವೂ ನಡೆಯುತ್ತಿದೆ ಎಂದು ತಿಳಿದು ಬಂದಿದೆ.

ಈ ರೀತಿ ಅನ್ಯಾಯಗಳು ನಡೆಯದಂತೆ ತಕ್ಷಣ ಕ್ರಮ ಕೈಗೊಳ್ಳಲಾಗುವುದೆಂದು ಭದ್ರಾವತಿ ಜನತೆ ಆಶಿಸುತ್ತದೆ

"ಭದ್ರಾವತಿ ಪೌರ"

ವಿಶಾಲವಾದ ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟಲು ಕರೆ

ಅಜಯ ಘೋಷ್

ಕಳೆದ ಸಾರ್ವತ್ರಿಕ ಚುನಾವಣೆಗಳ ನಂತರ, ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಾಗುವ ಅರ್ಹತೆ ಇರುವ ಎಲ್ಲರನ್ನೂ ಸೇರಿಸಿಕೊಂಡು ಪಾರ್ಟಿಯ ಸದಸ್ಯರ ಸಂಖ್ಯೆಯನ್ನು ಎರಡರಷ್ಟು ಹೆಚ್ಚು ಮಾಡಬೇಕೆಂದು ಕೇಂದ್ರ ಸಮಿತಿಯು ಕರೆ ಕೊಟ್ಟಿತ್ತು. ಹೆಚ್ಚು ಕಡಿಮೆ ಎಲ್ಲ ಪ್ರಾಂತಗಳಲ್ಲೂ ಈಗ ಸದಸ್ಯರ ಸಂಖ್ಯೆ ದ್ವಿಗುಣವಾಗಿದೆ. ಏಪ್ರಿಲ್ ತಿಂಗಳಲ್ಲಿ ಪಾರ್ಟಿಯ ವಿಶೇಷ ಅಧಿವೇಶನ ನಡೆಯುವ ವೇಳೆಗೆ ಪಾರ್ಟಿಯ ಸದಸ್ಯರ ಸಂಖ್ಯೆಯು ಎರಡೂವರೆ ಲಕ್ಷ ಅಥವ ಅದಕ್ಕಿಂತಲೂ ಹೆಚ್ಚೇ ಆಗಬಹುದು. ಸಂಘಟನೆಯ ಕ್ಷೇತ್ರದಲ್ಲಿ ಆಳವಾಗಿ ಬೇರು ಬಿಟ್ಟಿದ್ದ ಕೆಲವು ಪಂಥವಾದಿ ಭಾವನೆಗಳು, ಪಾರ್ಟಿಯ ಪ್ರಭಾವ ಬೆಳೆಯುತ್ತಿರುವಾಗಲೂ ಪಾರ್ಟಿಯ ವಿಸ್ತರಣೆಗೆ ತಡೆಯಾಗಿ ನಿಂತಿದ್ದುವು. ಅವುಗಳನ್ನು ಈಗ ತೊಡೆದು ಹಾಕಲಾಗುತ್ತಿದೆ ಎಂದು ಸ್ಪಷ್ಟವಾಗಿದೆ.

ಆದರೆ, ಈಗ ಸಾಧಿಸಲಾಗಿರುವುದು ಕೇವಲ ಆರಂಭಕ್ಕಿಂತ ಹೆಚ್ಚಿನದೇನೂ ಅಲ್ಲವೆಂದು ಒತ್ತಿ ಹೇಳದಿದ್ದರೆ ದೊಡ್ಡ ತಪ್ಪಾಗುವುದು. ಸಾಮೂಹಿಕವಾದ ಪಾರ್ಟಿಯನ್ನು ಕಟ್ಟುವುದಕ್ಕೆ ಸಂಬಂಧಿಸಿರುವ ಜಟಿಲವಾದ ಮತ್ತು ಹೆಚ್ಚು ಕಷ್ಟವಾದ ಕಾರ್ಯಗಳನ್ನು ಇನ್ನು ಮುಂದಕ್ಕೆ ಕೈಗೊಳ್ಳಬೇಕಾಗಿದೆ.

ಈ ಕಾರ್ಯಗಳು ಏನು ಮತ್ತು ಅವುಗಳನ್ನು ನೆರವೇರಿಸುವುದು ಹೇಗೆ ಎಂಬುದನ್ನು ಏಪ್ರಿಲ್‌ನಲ್ಲಿ, ಅಮೃತಸರದಲ್ಲಿ ನಡೆಯಲಿರುವ ವಿಶೇಷ ಪಾರ್ಟಿ ಅಧಿವೇಶನವು ನಿರ್ಣಯ ಮಾಡುವುದು. ಹಾಗೆ ನಿರ್ಣಯವಾಗುವ ಮೊದಲೇ ಅದರ ಬಗ್ಗೆ ಬರೆಯುವುದು ಈ ಲೇಖನದ ಉದ್ದೇಶವಲ್ಲ. ಕೆಲವು ಸರ್ವಸಾಮಾನ್ಯ ವಿಚಾರಗಳನ್ನು ಮಾತ್ರ ಈ ಲೇಖನದಲ್ಲಿ ಸ್ಪಷ್ಟೀಕರಿಸಲಾಗುವುದು.

ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿ—ಮೂಲಭೂತ ಅವಶ್ಯಕತೆ

ಕಮ್ಯೂನಿಸ್ಟ್ ಪಾರ್ಟಿಯು ನಿಯಮಬದ್ಧವಾಗಿ, ಬಹಿರಂಗವಾಗಿ, ಕೆಲಸ ಮಾಡುವಂಥ ಪರಿಸ್ಥಿತಿ ಇರುವುದರಿಂದ ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿ ಅಗತ್ಯ ಎಂದು ಕೆಲವರು ತಿಳಿದುಕೊಂಡಿರಬಹುದು. ಸಮಾಜವಾದವನ್ನು ಶಾಂತ ಮಾರ್ಗಗಳಿಂದ ಕೈಗೂಡಿಸುವುದಕ್ಕೆ ಸಾಧ್ಯತೆ ಇದೆ ಎಂಬುದಕ್ಕೆ ಸಂಬಂಧಿಸಿ ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿಯ ಅವಶ್ಯಕತೆ ಇದೆ ಎಂದು ಕೆಲವರು ಯೋಚಿಸಿಕೊಂಡಿರಬಹುದು. ಇದು ನಿಜವೆಂದು ತೋರಬಹುದಾದರೂ ಸತ್ಯದಿಂದ ಬಹಳ ದೂರವಾಗಿದೆ. ಇಂಥ ತಪ್ಪು ಅಭಿಪ್ರಾಯಗಳು ಬೆಳೆದರೆ, ಕಮ್ಯೂನಿಸ್ಟ್ ಪಾರ್ಟಿಗೂ ಬಂಡವಾಳಶಾಹಿಯ, ಪುಟ್ಟ ಬಂಡವಾಳಶಾಹಿಯ ಹಾಗೂ ಸೋಷ್ಯಲ್ ಡೆಮಾಕ್ರಸಿಯ ಪಕ್ಷಗಳಿಗೂ ಇರುವ ವ್ಯತ್ಯಾಸಗಳನ್ನು ಕಡೆಗಾಣಿಸಿದಂತಾಗುವುದು. ಇಂಥ ತಪ್ಪು ಅಭಿಪ್ರಾಯಗಳನ್ನು ಇಟ್ಟುಕೊಂಡು ನಾವು ಒಂದು "ಸಾಮೂಹಿಕ ಪಕ್ಷ"ವನ್ನು ಕಟ್ಟಬಹುದು; ಆದರೆ ಅದು ಕಾರ್ಮಿಕ ವರ್ಗದ ಸಾಮೂಹಿಕ ಪಕ್ಷವಾಗಲಾರದು, ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿಯೂ ಆಗಲಾರದು. ಎಲ್ಲ ಪ್ರಾಯೋಗಿಕ ವಿಚಾರಗಳ ಮಟ್ಟಿಗೆ ಅದು ಕಾಂಗ್ರೆಸ್ಸಿನಂಥ ಒಂದು ಪಕ್ಷವಾಗುವುದು, ಒಂದು ರೀತಿಯ ಎಡಪಕ್ಷದ ಕಾಂಗ್ರೆಸ್ ಆಗುವುದು. ಅಂಥ ಪಕ್ಷವು ಎಷ್ಟೇ ಪುರೋಗಾಮಿ ಘೋಷಣೆಗಳನ್ನು ಕೊಟ್ಟರೂ ಸರಕಾರವನ್ನು ಎಷ್ಟೇ ಕಟುವಾಗಿ ಟೀಕಿಸಿದರೂ ಅಧಿಕಾರ ಸ್ವಾಧೀನತೆಯ ಹೋರಾಟದಲ್ಲಿ ಮತ್ತು ಮೂಲಭೂತವಾದ ಸಾಮಾಜಿಕ ಬದಲಾವಣೆಯಲ್ಲಿ ಜನತೆಗೆ ನೇತೃತ್ವ ಕೊಡಲು ಅದಕ್ಕೆ ಸಾಧ್ಯವಾಗಲಾರದು. ಪ್ರತಿಗಾಮಿ ಶಕ್ತಿಗಳ ಹೊಡೆತದಿಂದ ತನ್ನನ್ನೂ ಜನತೆಯನ್ನೂ ರಕ್ಷಿಸುವುದಕ್ಕೆ ಕೂಡ ಅಂಥ ಪಕ್ಷಕ್ಕೆ ಸಾಧ್ಯವಾಗಲಾರದು.

ಹೊಸ ಘೋಷಣೆಯಲ್ಲ

ರಷ್ಯದಲ್ಲಿ ಕಾರ್ಯಕರ್ತರನ್ನು ಸಿದ್ಧಗೊಳಿಸುವ ಮೊದಲನೆಯ ಕರ್ತವ್ಯವು ಯಶಸ್ವಿಯಾಗಿ ಪೂರ್ತಿಯಾದಾಗ, ತೀವ್ರವಾದ ನಿಯಮಬಾಹಿರತೆಯ ಪರಿಸ್ಥಿತಿ ಉಳಿದಿದ್ದರೂ, 1912ರಲ್ಲೇ, 'ಕಾರ್ಯಕರ್ತರ ಪಕ್ಷವನ್ನು ನಿಜವಾದ ಸಾಮೂಹಿಕ ಕಾರ್ಮಿಕ ಪಕ್ಷವನ್ನಾಗಿ ಬದಲಾವಣೆ ಮಾಡಬೇಕು' ಎಂಬ ಘೋಷಣೆಯನ್ನು ಬೋಲ್ಶೆವಿಕರು ಅಂಗೀಕರಿಸಿದ್ದರು ಎಂದು ನಾವು ನೆನಪಿಟ್ಟುಕೊಳ್ಳಬೇಕು. ಎಲ್ಲ ದೇಶಗಳಲ್ಲೂ ಎಲ್ಲ ಘಟ್ಟಗಳಲ್ಲೂ ಕ್ರಾಂತಿಯ ಜಯಕ್ಕೆ ಪಾರ್ಟಿಯು ಸಾಮೂಹಿಕ ಪಾರ್ಟಿಯಾಗುವುದು ಅನಿವಾರ್ಯ ಅವಶ್ಯಕತೆಯೆಂದು ಕಮ್ಯೂನಿಸ್ಟರು ಪರಿಗಣಿಸಿದ್ದಾರೆ ಎಂದು ನಾವು ನೆನಪಿಟ್ಟುಕೊಳ್ಳಬೇಕು.

ಆದುದರಿಂದ ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿ ಎನ್ನುವುದು ಹೊಸ ಘೋಷಣೆಯೇನಲ್ಲ. ನಿಯಮಬದ್ಧವಾಗಿ ಕೆಲಸ ಮಾಡುವ ಪರಿಸ್ಥಿತಿಯಿಂದ ಅಥವ ಶಾಂತ ಮಾರ್ಗಗಳಿಂದ ಸಮಾಜಸತ್ತೆಯನ್ನು ಸಾಧಿಸಬಲ್ಲ ಪರಿಸ್ಥಿತಿಯಿಂದ ಈ ಘೋಷಣೆ ಹುಟ್ಟಿದ್ದಲ್ಲ. ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟುವುದಕ್ಕೆ ನಿಯಮಬದ್ಧತೆಯ ಪರಿಸ್ಥಿತಿಯಿಂದ ತುಂಬ ಅನುಕೂಲವಾಗುತ್ತದೆ; ಅನೇಕ ದೇಶಗಳಲ್ಲಿ ಉಂಟಾಗಿರುವ ಹೊಸ ಸಾಧ್ಯತೆಗಳು ಸಮಾಜಸತ್ತೆಯ ಸಲುವಾಗಿ ಸಾಮೂಹಿಕ ಚಳುವಳಿಯನ್ನು ಬಲಪಡಿಸುವುದಕ್ಕೂ ವಿಸ್ತರಿಸುವುದಕ್ಕೂ ಸಹಾಯಕವಾಗುತ್ತದೆ ನಿಜ. ಆದರೆ ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿಯ ಅಗತ್ಯವು ಈ ಪರಿಸ್ಥಿತಿಗಳಿಂದ ಹುಟ್ಟಿರುವುದಲ್ಲ. ಜನತಾ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತೆಯ ಸಲುವಾಗಿ ಜನರ ಸಾಮೂಹಿಕ ಹೋರಾಟಗಳನ್ನು ನಡೆಸಲು ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿಗೆ ಮಾತ್ರ ಸಾಧ್ಯವೆಂಬ ಮೂಲಭೂತ ವಿಷಯದಿಂದ ಅದು ಹುಟ್ಟಿದೆ. ಜಯದ ನಂತರ ಸಮಾಜವಾದೀ ರಚನೆಯ ಕಾರ್ಯದಲ್ಲಿ ಜನತೆಯ ನೇತೃತ್ವ ವಹಿಸುವುದಕ್ಕೂ ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿಗೆ ಮಾತ್ರ ಸಾಧ್ಯವಾಗುವುದು.

ಎಲ್ಲ ಸಂದರ್ಭಗಳಲ್ಲಿ, ಎಲ್ಲ ಪರಿಸ್ಥಿತಿಗಳಲ್ಲಿ ಕೂಡ ಕಮ್ಯೂನಿಸ್ಟ್ ಪಾರ್ಟಿಯು ಮಾರ್ಕ್ಸ್‌ವಾದ - ಲೆನಿನ್‌ವಾದದ ಭದ್ರವಾದ ತಾತ್ವಿಕ ತಳಹದಿಯ ಮೇಲೆ ಕಟ್ಟಲ್ಪಡುತ್ತದೆ. ಕಮ್ಯೂನಿಸ್ಟ್ ಪಾರ್ಟಿಯು ಪ್ರಜಾಪ್ರಭುತ್ವವನ್ನು ಆಧರಿಸಿಕೊಂಡಿರುವ ಬಲವಾದ ಕೇಂದ್ರೀಕರಣವಿರುವ ಪಕ್ಷ. ಅದು ಸ್ವಯಂಪ್ರೇರಿತವಾದ ಉಕ್ಕಿನ ಶಿಸ್ತನ್ನು ಅನುಸರಿಸುತ್ತದೆ. ಅದು ಯಾವಾಗಲೂ ತನ್ನ ಕೆಲಸವನ್ನು ಉತ್ತಮಗೊಳಿಸುವ ಉದ್ದೇಶದಿಂದ, ಜನರೊಡನೆ ತನ್ನ ಸಂಬಂಧವನ್ನು ಬಲಪಡಿಸುವ ಉದ್ದೇಶದಿಂದ, ಜನರ ನೇತೃತ್ವ ವಹಿಸಲು ಸಾಧ್ಯವಾಗುವುದಕ್ಕೆ ಜನರಿಂದ ಕಲಿತುಕೊಳ್ಳುವ ಉದ್ದೇಶದಿಂದ—ಟೀಕೆ ಹಾಗೂ ಸ್ವಯಂ ಟೀಕೆಯ ಆಯುಧವನ್ನು ಉಪಯೋಗಿಸುವ ಪಕ್ಷ. ಅದು ತನ್ನ ಅಣಿಯೊಳಗೆ ಗುಂಪುಗಳಿಗೂ ಒಳಗುಂಪುಗಳಿಗೂ ಎಡೆ ಕೊಡುವುದಿಲ್ಲ. ಪ್ರತಿಯೊಬ್ಬ ಸದಸ್ಯನೂ ಪಾರ್ಟಿಯ ಕಾರ್ಯಕ್ರಮವನ್ನು ಒಪ್ಪಿಕೊಳ್ಳಬೇಕು, ಪಾರ್ಟಿಯ ಶಿಸ್ತಿಗೆ ಒಳಪಟ್ಟಿರಬೇಕು, ಪಾರ್ಟಿಗೆ ಚಂದಾ ಮೊದಲಾದವುಗಳನ್ನು ತೆರಬೇಕು. ಎಲ್ಲದಕ್ಕಿಂತಲೂ ಮುಖ್ಯವಾಗಿ ಪಾರ್ಟಿಯ ಒಂದು ಘಟಕದಲ್ಲಿದ್ದುಕೊಂಡು ಕೆಲಸ ಮಾಡಬೇಕು, ಅವನ ಕೆಲಸವನ್ನು ಆ ಘಟಕವು ಕ್ರಮವಾಗಿ ಪರಿಶೀಲನೆ ಮಾಡುತ್ತಿರಬೇಕು.

ಕಮ್ಯೂನಿಸ್ಟ್ ಪಾರ್ಟಿಯು ಅಧಿಕಾರದಲ್ಲಿರಲಿ, ಪ್ರತಿಪಕ್ಷವಾಗಿರಲಿ, ಅದರ ಸಂಘಟನೆಯ ಮೂಲಭೂತ ತತ್ವಗಳಲ್ಲಿ ವ್ಯತ್ಯಾಸವಿಲ್ಲ. ಅದರ ಕೆಲಸದ ಪರಿಸ್ಥಿತಿ ನಿಯಮಬದ್ಧವಾಗಿರಲಿ, ನಿಯಮಬಾಹಿರವಾಗಿರಲಿ, ಸಂಘಟನೆಯ ಮೂಲಭೂತ ತತ್ವಗಳು ಬದಲಾಗುವುದಿಲ್ಲ. ಅಧಿಕಾರ ಸ್ವಾಧೀನತೆಯ ಹೋರಾಟವು ಆಂತರಿಕ ಯುದ್ಧದ ರೂಪ ತಾಳಲಿ, ಶಾಂತ ಮಾರ್ಗಗಳನ್ನು ಅನುಸರಿಸಲಿ, ಅದರ ಸಂಘಟನೆಯ ಮೂಲಭೂತ ತತ್ವಗಳು ಬೇರೆಯಾಗುವುದಿಲ್ಲ.

ಈ ಮೂಲಭೂತ ತತ್ವಗಳು ಜನರು ನಡೆಸತಕ್ಕ ಹೋರಾಟದ ಸ್ವಭಾವದಿಂದ ಹುಟ್ಟುತ್ತವೆ.

ಸಮಾಜ ಪರಿವರ್ತನೆಯ ಹೋರಾಟ

ಮೂಲಭೂತವಾದ ಸಾಮಾಜಿಕ ಪರಿವರ್ತನೆಗೆ ನಡೆಯುವ ಹೋರಾಟವು ಆಳುವ ವರ್ಗದ ಈ ಪ್ರತಿನಿಧಿ ಅಥವ ಆ ಪ್ರತಿನಿಧಿಯ ವಿರೋಧವಾಗಿ ನಡೆಯುವ ಹೋರಾಟ ಮಾತ್ರವಲ್ಲ. ಒಂದು ಅಥವ ಮತ್ತೊಂದು ರಾಜಕೀಯ ಪಕ್ಷದ ವಿರೋಧವಾದ ಹೋರಾಟ ಮಾತ್ರವೂ ಅಲ್ಲ. ಅದು ಅನಿವಾರ್ಯವಾಗಿ ಆಳುವ ವರ್ಗಗಳ ಪ್ರಬಲವಾದ ಹಾಗು ಕೇಂದ್ರೀಕೃತವಾದ ಪ್ರಭುತ್ವವನ್ನು ವಿರೋಧಿಸುವ ಹೋರಾಟವಾಗಿದೆ. ಪ್ರಭುತ್ವವು ವರ್ಗ ಆಧಿಪತ್ಯವನ್ನು ಸ್ಥಿರಗೊಳಿಸುವ ಉಪಕರಣವಾಗಿದೆ. ಕಾರ್ಮಿಕ ವರ್ಗವು ಅಧಿಕಾರವನ್ನು ವಶಪಡಿಸುವುದೆಂದರೆ ಈ ಹಳೆಯ ಪ್ರಭುತ್ವದ ಬದಲು ಒಂದು ಹೊಸ ಪ್ರಭುತ್ವವನ್ನು ಸ್ಥಾಪಿಸುವುದಾಗಿದೆ. ಆದುದರಿಂದ ಜನತಾ ಪ್ರಜಾಪ್ರಭುತ್ವದ ಸಲುವಾಗಿ ಜನಸಮೂಹ ನಡೆಸುವ ಹೋರಾಟವು ಅನಿವಾರ್ಯವಾಗಿ ತೀವ್ರ ಹಾಗು ಕಠಿಣ ಹೋರಾಟವಾಗಿರುವುದು. ಆದುದರಿಂದ ಜನತಾ ಪ್ರಜಾಪ್ರಭುತ್ವ ಹಾಗೂ ಸಮಾಜಸತ್ತೆಗೆ ನಡೆಯುವ ಹೋರಾಟದ ಸ್ವರೂಪ ಏನಿದ್ದರೂ, ಅದರಲ್ಲಿ ಜನತೆ ಜಯ ಹೊಂದಬೇಕಾದರೆ ಸಂಘಟಿತವಾದ ಮತ್ತು ಅತ್ಯಂತ ಕೇಂದ್ರೀಕೃತವಾದ ಮುಂದಳ ಇರಲೇಬೇಕು. ಅದೇ ಸಮಯದಲ್ಲಿ ಈ ಕೇಂದ್ರೀಕರಣವು ಪಕ್ಷದೊಳಗಣ ನಿಜವಾದ ಪ್ರಜಾಪ್ರಭುತ್ವದ ಆಧಾರದಲ್ಲಿ ನಿಂತಿರಬೇಕು.

ಪಾರ್ಟಿಯ ಸಂಘಟನೆಯ ತತ್ವಗಳು ಎಲ್ಲ ಪರಿಸ್ಥಿತಿಗಳಲ್ಲೂ ಒಂದೇ ಆಗಿದ್ದರೂ ಸಂಘಟನೆಯ ರೂಪಗಳು ಹಾಗು ಕೆಲಸದ ರೀತಿಗಳು ಒಂದೇ ಆಗಿರಲಾರವು. ಪಾರ್ಟಿಯು ಯಾವ ಪರಿಸ್ಥಿತಿಗೆ ಒಳಪಟ್ಟು ಕೆಲಸ ಮಾಡಬೇಕಾಗುತ್ತದೆ, ಎಂಥ ರಾಜಕೀಯ ಕರ್ತವ್ಯಗಳನ್ನು ನೆರವೇರಿಸಬೇಕಾಗುತ್ತದೆ ಎನ್ನುವುದನ್ನು ಹೊಂದಿಕೊಂಡು ಅವು ಬದಲಾಗುತ್ತವೆ. ಆದುದರಿಂದ ಪಾರ್ಟಿಯ ಘಟನೆಯು ಸಂಘಟನೆಯ ತತ್ವಗಳನ್ನು ನಿರ್ದೇಶಿಸಿರುವುದಷ್ಟೇ ಅಲ್ಲದೆ ನಿಯಮಗಳನ್ನೂ ಒಳಗೊಂಡಿರುತ್ತದೆ. ಅಂದರೆ ಸದ್ಯದ ಪರಿಸ್ಥಿತಿಗೆ ತತ್ವಗಳನ್ನು ಹೇಗೆ ಹೊಂದಿಸಿಕೊಳ್ಳಬೇಕು ಎನ್ನುವುದು ಕಾಲ ಕಾಲಕ್ಕೆ ಬದಲಾವಣೆ ಹೊಂದುತ್ತದೆ. ಆದುದರಿಂದ ಕೇಂದ್ರ ಸಮಿತಿ ಸೂಚಿಸಿರುವ ತಿದ್ದುಪಾಟುಗಳು ಸರಿಯೇ ಎನ್ನುವುದನ್ನು ಎರಡು ದೃಷ್ಟಿಗಳಿಂದ ಪರೀಕ್ಷಿಸಬೇಕು—ಒಂದು, ಮಾರ್ಕ್ಸಿಸ್ಟ್-ಲೆನಿನಿಸ್ಟ್ ಪಕ್ಷದ ಮೂಲಭೂತ ಸಂಘಟನಾ ತತ್ವಗಳಿಗೆ ಅದು ಸರಿಯಾಗಿದೆಯೆ? ಎರಡು, ಪಾರ್ಟಿಯ ಕೆಲಸವನ್ನು ಮೊದಲಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಸಂಘಟಿಸಲು, ಪಾರ್ಟಿಯ ಇಂದಿನ ಸಾಮೂಹಿಕ ರಾಜಕೀಯ ಕರ್ತವ್ಯಗಳನ್ನು ನೆರವೇರಿಸಲು ಅದು ಸಹಾಯಕವಾಗಿದೆಯೆ?

ಈ ಎರಡು ದೃಷ್ಟಿಗಳಿಂದ ನಮ್ಮ ಹೊಸ ಘಟನೆಯನ್ನು ತಯಾರಿಸಬೇಕು. ಕೇಂದ್ರ ಸಮಿತಿ ಸೂಚಿಸಿರುವ ತಿದ್ದುಪಾಟುಗಳ ಮೇಲೆ ಪ್ರಾಂತ ಸಮ್ಮೇಳನಗಳಲ್ಲಿ, ನಡೆಯುವ ಚರ್ಚೆಗಳು ಅದಕ್ಕೆ ತುಂಬ ಸಹಾಯಕವಾಗುವವು.

ಮೇಲೆ ಹೇಳಿದಂತೆ, ಘಟನೆಯನ್ನು ತಯಾರಿಸುವಾಗ, ನಮ್ಮ ಕ್ರಾಂತಿಯ ಇಂದಿನ ಘಟ್ಟದಲ್ಲಿ ನಾವು ನೆರವೇರಿಸತಕ್ಕ ರಾಜಕೀಯ ಕರ್ತವ್ಯಗಳ ಸ್ವಭಾವವನ್ನು ಪಾರ್ಟಿ ಗಮನದಲ್ಲಿ ಇಟ್ಟುಕೊಳ್ಳಬೇಕು.

(ಮುಂದುವರಿಯುವುದು)

ಮುಂಧ್ರಾ ಪ್ರಕರಣ ಇಲ್ಲಿಗೇ ಮುಕ್ತಾಯವೇ?

ಬಿರುಗಾಳಿಯಂತೆ ಎದ್ದು, ದೇಶದ ಎಲ್ಲ ಜನರ ಗಮನ ಸೆಳೆದ ಮುಂಧ್ರಾ ಪ್ರಕರಣವು ಒಂದು ಘಟ್ಟವನ್ನು ಮುಟ್ಟಿದೆ. ಕಳೆದ ವರ್ಷ ಜೂನ್ 24ರಂದು ಜೀವವಿಮಾ ಕಾರ್ಪೊರೇಷನ್ ಶ್ರೀ ಹರಿದಾಸ್ ಮುಂಧ್ರಾರ ಕೆಲವು ಕೈಗಾರಿಕೆಗಳಲ್ಲಿ ಸುಮಾರು ಒಂದು ಕೋಟಿ ಇಪ್ಪತ್ತಾರು ಲಕ್ಷ ರೂಪಾಯಿಗಳಷ್ಟು ಷೇರುಗಳನ್ನು ಕೊಂಡದ್ದು ಅಕ್ರಮವಾಗಿತ್ತು, ಅಲ್ಲದೆ ಅಲಾಭದಾಯಕವೂ, ಸಾರ್ವಜನಿಕರ ಹಣವು ಅಪವ್ಯಯವಾಗುವ ಸಂಭವವಾಗಿದೆಯೆಂದೂ, ಆರೋಪದ ಮೇಲೆ, ಪಾರ್ಲಿಮೆಂಟಿನಲ್ಲಿ ಎತ್ತಲಾದ ಪ್ರಶ್ನೆಯ ನಂತರದಲ್ಲಿ, ವಿಚಾರಣೆ ನಡೆಸುವುದಾಗಿ ಸರಕಾರ ಘೋಷಿಸಿತು. ಅಂತೆಯೇ ಮುಂಬಯಿ ಹೈಕೋರ್ಟ್ ನ್ಯಾಯಾಧೀಶರಾದ ಚೀಫ್ ಜಸ್ಟಿಸ್ ಛಾಗ್ಲಾರವರನ್ನು ನೇಮಕ ಮಾಡಲಾಯಿತು. ನ್ಯಾಯಾಧೀಶರಿಂದ ನಡೆದ ಪ್ರಥಮ ವಿಚಾರಣೆ ಇದೊಂದೆ. ಈ ಏಕ ಸದಸ್ಯ ವಿಚಾರಣಾ ಸಮಿತಿಯು ಸಾಕ್ಷ್ಯಗಳನ್ನು ಪರಿಶೀಲಿಸಿ, ಸರಕಾರಕ್ಕೆ ತನ್ನ ವರದಿಯನ್ನು ಸಮರ್ಪಿಸಿದೆ.

ವರದಿಯಲ್ಲಿ ಮುಚ್ಚುಮರೆಯಿಲ್ಲದೆ ವಿಷಯಗಳನ್ನು ಮಂಡಿಸಲಾಗಿದೆ. ಪ್ರಕಟಗೊಂಡಿರುವ ಈ ವರದಿ ಬಹಳ ಮಹತ್ವದಿಂದ ಕೂಡಿದ್ದಾಗಿದೆ. ವರದಿಯ ಪೂರ್ಣಪಾಠವು ಎಲ್ಲ ದಿನ ಪತ್ರಿಕೆಗಳಲ್ಲೂ ಪ್ರಕಟವಾಗಿರುವುದರಿಂದ ಇಲ್ಲಿ ಪುನರುಚ್ಚರಿಸುವುದು ಅನುಚಿತ. ವರದಿಯಲ್ಲಿ ಎರಡು ಮುಖ್ಯಾಂಶಗಳು ಮಾತ್ರ ಇಲ್ಲಿ ಉಲ್ಲೇಖಿಸಬೇಕಾಗಿದೆ. ಮೊದಲನೆಯದು, ಸಚಿವಾಲಯದಲ್ಲಿ ನಡೆಯುವ ಎಲ್ಲ ಕೆಲಸಕಾರ್ಯಗಳಿಗೂ ಸಚಿವರೇ ಪ್ರಧಾನವಾಗಿ ಹೊಣೆಗಾರರು ಎನ್ನುವುದು, ಸರಕಾರಕ್ಕೂ ಮತ್ತು ಸಾರ್ವಜನಿಕ ಉದ್ದಿಮೆಗಳಲ್ಲಿ ಹಣ ತೊಡಗಿಸಲಾಗುವ ಕಾರ್ಪೊರೇಷನ್‌ಗಳಿಗೂ ಇರಬೇಕಾದ ಆಡಳಿತ ಸಂಬಂಧ.

ಟಿ. ಟಿ. ಕೆ. ನಿರ್ಗಮನ

ವರದಿಯ ಪ್ರಕಟಣೆಯ ನಂತರ ಅರ್ಥ ಸಚಿವ ಟಿ. ಟಿ. ಕೆ.ಯವರು ರಾಜಿನಾಮೆಯನ್ನಿತ್ತಿದ್ದಾರೆ. ಜಸ್ಟಿಸ್ ಛಾಗ್ಲಾರವರು ತಮ್ಮ ವರದಿಯಲ್ಲಿ ಟಿ. ಟಿ. ಕೆ.ಯವರ ಜವಾಬುದಾರಿಯನ್ನು ಕುರಿತು ಪ್ರಸ್ತಾಪಿಸುತ್ತ "ಅರ್ಥ ಸಚಿವ ಶಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಎಚ್. ಎಂ. ಪಟೇಲರು ಮಾಡಿದ ಕೆಲಸಕ್ಕೆ ಅರ್ಥ ಸಚಿವರೇ ಪೂರ್ಣವಾಗಿ ಹಾಗೂ ಆದ್ಯಂತವಾಗಿ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳಬೇಕು ಮತ್ತು ವ್ಯವಹಾರವು ಅಯುಕ್ತವೂ, ಅಸಮರ್ಥನೀಯವೂ ಆದುದಾಗಿದ್ದರೆ ಈ ವ್ಯವಹಾರಕ್ಕೆ ನೇರವಾಗಿ ಶ್ರೀ ಪಟೇಲರೇ ಜವಾಬ್ದಾರರಾದರೂ ಸಂವಿಧಾನದ ದೃಷ್ಟಿಯಿಂದ ಸಚಿವರೇ ಹೊಣೆ. ಶ್ರೀ ಪಟೇಲರ ಕ್ರಮಗಳನ್ನು ಅರ್ಥಸಚಿವರು ನಿರಾಕರಿಸಲಿಲ್ಲ. ಜೂನ್ 24ರಂದು ನಡೆದ ವ್ಯವಹಾರದಲ್ಲಿ ಶ್ರೀಯುತ ಪಟೇಲರು ವಹಿಸಿದ ಪಾತ್ರಕ್ಕೆ ಸಚಿವರ ಮೌನ ಸಮ್ಮತಿ ಇದ್ದಿತು. ಸೆಪ್ಟಂಬರ್ 4ರಂದು, ಜೀವವಿಮಾ ಕಾರ್ಪೊರೇಷನ್ನಿನ ಬಂಡವಾಳ ಹೂಡಿಕೆ ವಿಷಯವಾಗಿ ಲೋಕಸಭೆಯಲ್ಲಿ ಕೇಳಲಾದ ಪ್ರಶ್ನೆ ಒಂದಕ್ಕೆ ಉತ್ತರ ಕೊಡುವಾಗ ಸಚಿವರು ಸಂಪೂರ್ಣವಾಗಿ ಮುಚ್ಚುಮರೆ ಇಲ್ಲದೆ ಸಂಗತಿಗಳನ್ನು ಸಭೆಯ ಮುಂದೆ ಇಡಲಿಲ್ಲ. ಸೆಪ್ಟಂಬರ್ 4ನೇ ತಾರೀಖಿಗೆ ಮೊದಲೇ ಸಚಿವರಿಗೆ ಎಲ್ಲ ವಿಷಯಗಳೂ ಗೊತ್ತಿದ್ದಿತು" ಎಂದು ಸ್ಪಷ್ಟಗೊಳಿಸಿದೆ. ಈ ಅಂಶಗಳು ಕ್ಷುಲ್ಲಕವಾದ ಆರೋಪಗಳಾಗಿಲ್ಲ, ಗಂಭೀರವಾದುವಾಗಿದೆ. ಟಿ. ಟಿ. ಕೆ. ವರದಿ ಪ್ರಕಟವಾದ ನಂತರದಲ್ಲಿ ತಮ್ಮ ರಾಜೀನಾಮೆಯನ್ನೀಯುತ್ತ ಇತ್ತಿರುವ ಹೇಳಿಕೆಯು ವಿಚಿತ್ರವಾಗಿವೆ. ತಮ್ಮ ಹೊಣೆಯೇನೂ ಇದರಲ್ಲಿಲ್ಲವೆಂದೂ, ತಾವೊಬ್ಬ ಏನೂ ಅರಿಯದ ವ್ಯಕ್ತಿಯೆಂದೂ, ತಮ್ಮ ಕೈಕೆಳಗಿನ ಅಧಿಕಾರಿಗಳು ಮಾಡಿದ ತಪ್ಪಿಗೆ ತಾವು ಶಿಕ್ಷೆ ಅನುಭವಿಸಬೇಕಾಗಿದೆ ಎಂದೂ ತಿಳಿಸಿದ್ದಾರೆ.

ಕಣ್ಣೊರೆಸಲು ಯತ್ನ

ಟಿ. ಟಿ. ಕೆ. ಯವರ ರಾಜೀನಾಮೆಯನ್ನು ಕುರಿತು ಈಗಾಗಲೇ ಅನೇಕ ಪ್ರತಿಕ್ರಿಯೆ ಬಂದಿವೆ. ಪ್ರಧಾನಿ ನೆಹರೂರವರು ಟಿ. ಟಿ. ಕೆ.ಯವರಿಗೆ ಬೇಕಾದಷ್ಟು ಸಹಬಾಸ್‌ಗಿರಿಯನ್ನು ಕೊಟ್ಟು, ಟಿ. ಟಿ. ಕೆ. ಯವರಿಗೂ ಈ ವ್ಯವಹಾರಕ್ಕೂ ಯಾವ ಸಂಬಂಧವೂ ಇಲ್ಲವೆಂದೂ, ಅವರು ಆರ್ಥಿಕ ಬಿಕ್ಕಟ್ಟಿನ ಅದರಲ್ಲೂ ವಿದೇಶೀ ವಿನಿಮಯದ ಬಿಕ್ಕಟ್ಟಿನ ಕಾಲದಲ್ಲಿ ವಹಿಸಿದ ಪಾತ್ರ ಮಹತ್ವಪೂರ್ಣವಾದುದೆಂದೂ, ಅವರ ನಿರ್ಗಮನದಿಂದ ಭಾರೀ ನಷ್ಟವಾಗಿದೆಯೆಂದೂ ತೋಡಿಕೊಂಡಿದ್ದಾರೆ. ಅಲ್ಲದೆ ಛಾಗ್ಲಾ ಸಮಿತಿಯ ವರದಿಯು "ಏಕಪಕ್ಷೀಯವಾಗಿದೆ" ಎಂದು ಹೇಳುವಷ್ಟು ದೂರ ನೆಹರೂರವರು ಹೋಗಿದ್ದಾರೆ. ದೇಶದಲ್ಲಿನ ಅನೇಕ ಪತ್ರಿಕೆಗಳು ಟಿ. ಟಿ. ಕೆ. ನಿಜವಾಗಿಯೂ ಒಬ್ಬರು ಗಣ್ಯ ವ್ಯಕ್ತಿಯೆಂದೂ, ಈ ವ್ಯವಹಾರದಲ್ಲಿ ನಿಜವಾಗಿಯೂ ಅವರು ನಿಸ್ಪೃಹರಾಗಿದ್ದಾರೆಂದೂ, ಯಾರದೋ ತಪ್ಪಿಗಾಗಿ ಅವರು ಬಲಿಯಾಗಿದ್ದಾರೆಂದೂ ಹೇಳಿಕೊಂಡು ಅವರಿಗೆ ಸಾಕಷ್ಟು ಪ್ರಶಂಸೆಯನ್ನು ಮಾಡಿದೆ.

ಈ ಪ್ರಶಂಸೆಗಳನ್ನು ಟಿ ಟಿ. ಕೆ. ಒಬ್ಬರು ಅತ್ಯಂತ ನಿಸ್ಪೃಹ ವ್ಯಕ್ತಿ ಎಂದು ಸಾರಲು ಯತ್ನಿಸುತ್ತಿರುವುದು ಏಕೆ ಎಂಬ ಸಂದೇಹ ಬರುವುದು ಸಹಜ. ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದಲ್ಲಿ ಈ ಬಗ್ಗೆ ತೀವ್ರವಾದ ಭಿನ್ನಾಭಿಪ್ರಾಯಗಳು ತಲೆದೋರಿರುವುದಾಗಿ ತಿಳಿದುಬಂದಿದೆ. ಛಾಗ್ಲಾ ಸಮಿತಿಯ ವರದಿಯನ್ನು ಅವರ ವಿಚಾರಣೆಯನ್ನು ಏಕಪಕ್ಷೀಯವೆಂದಾಗಲೀ ಯಾರಾದರೊಬ್ಬ ವ್ಯಕ್ತಿಗೆ ಅನ್ಯಾಯವಾಗಿದೆ ಎಂಬುದಾಗಲೀ ಹೇಳುವಷ್ಟು ಮಟ್ಟಿಗೆ ಹಲವು ಕಾಂಗ್ರೆಸ್ ನಾಯಕರು ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ. ಯಾರ ಅಭಿಪ್ರಾಯವು ಏನೇ ಇರಲಿ, ಸಾಮಾನ್ಯ ಜನರಿಗೆ, ಈ ವಿಚಾರಣೆಯನ್ನು ಆದಿಯಿಂದ ಅಂತ್ಯದ ವರೆಗೆ ಪರಿಶೀಲಿಸಿರುವವರಿಗೆ, ಛಾಗ್ಲಾರವರ ವರದಿಯಲ್ಲಿ ಅನ್ಯಾಯವಾಗಿದೆ ಎಂದು ಹೇಳಬಹುದಾದ ಅಂಶವೇನೂ ಕಾಣದು. ಬದಲಾಗಿ ನಿಜಾಂಶ ಇನ್ನೂ ಹೊರಬಿದ್ದಿಲ್ಲ ಎಂಬಂಶ ರುಜುವಾತಾಗುತ್ತದೆ. ಜಸ್ಟಿಸ್ ಛಾಗ್ಲಾರವರಂಥ ನ್ಯಾಯಮೂರ್ತಿಯ ತೀರ್ಪನ್ನು ಪ್ರಶ್ನಿಸುವುದು, ಅಲ್ಲದೆ ಇಂಥ ಒಂದು ಸಾರ್ವಜನಿಕ ಜೀವನದಲ್ಲಿ ಅತ್ಯಂತ ಮುಖ್ಯವಾದ ಪ್ರಶ್ನೆಯ ಮೇಲೆ ಕೊಡಲಾಗಿರುವ ತೀರ್ಪನ್ನು ಪ್ರಶ್ನಿಸುವುದು ಸೂಕ್ತವಲ್ಲವೆಂದು ಹೇಳಬಹುದು. ಬದಲಾಗಿ, ಈಗ ಹೊರಬಿದ್ದಿರುವ ಅಂಶಗಳ ಆಧಾರದ ಮೇಲೆ, ಮತ್ತಷ್ಟು ತೀವ್ರವಾಗಿ ತನಿಖೆ ನಡೆಸಿದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಒಳಿತಾಗುವುದು. ಈ ಬಗ್ಗೆ ಈಗಾಗಲೇ ಬೇಡಿಕೆಗಳೂ ಬಂದಿವೆ. ಸರಕಾರವು ಇದನ್ನು ಗಮನಿಸುವುದಗತ್ಯ.

ಪಾರ್ಲಿಮೆಂಟಿನಲ್ಲಿ

ಪಾರ್ಲಿಮೆಂಟಿನ ಉಭಯ ಸಭೆಗಳೂ ವರದಿಯನ್ನು ಚರ್ಚಿಸಲಿವೆ. ಟಿ. ಟಿ. ಕೆಯವರು ವರದಿಯ ಬಗ್ಗೆ ತಮ್ಮ ಹೇಳಿಕೆಯನ್ನು ಲೋಕ ಸಭೆಯಲ್ಲಿ ಇತ್ತಿದ್ದಾರೆ. ಅವರು ತಮ್ಮ ಹೇಳಿಕೆಯಲ್ಲಿ ಛಾಗ್ಲಾ ಸಮಿತಿಯವರು ವಿಚಾರಣೆಯಲ್ಲಿ ಅನುಸರಿಸಿದ ಕ್ರಮ ಸರಿಯಾಗಿರಲಿಲ್ಲವೆಂದೂ, ಸಮಿತಿಯ ತೀರ್ಪು ಸಾಕ್ಷ್ಯಗಳ ಮೇಲೆ ಆಧಾರಗೊಂಡಿರದೆ ಪುರಾವೆಗಳ ಮೇಲೆ ಆಧಾರಗೊಂಡಿದೆಯೆಂದೂ ತಿಳಿಸಿದ್ದಾರೆ.

ಸರಕಾರವು ಈ ವರದಿಯ ಬಗ್ಗೆ ತಳೆದಿರುವ ಧೋರಣೆ ಏನೆಂಬುದು ಇನ್ನೂ ತಿಳಿದುಬಂದಿಲ್ಲ. ಸರಕಾರದ ಧೋರಣೆಯನ್ನು ಪಂಡಿತ ನೆಹರೂರವರು ವರದಿಯ ಮೇಲೆ ಚರ್ಚೆ ಆರಂಭಿಸುತ್ತಾ ಸಭೆಯ ಮುಂದೆ ಇರಿಸುವರೆಂದು ತಿಳಿದುಬಂದಿದೆ. ಈ ಪ್ರಕರಣದ ಬಗ್ಗೆ ಇನ್ನು ಪೂರ್ಣ ತನಿಖೆಯು ನಡೆಯಬಹುದೆಂಬ ಸೂಚನೆ ಇರುವಂತೆ ಕಾಣುತ್ತದೆ. ಆದಷ್ಟು ಜಾಗ್ರತೆಯಾಗಿ ಪೂರ್ಣ ತನಿಖೆ ನಡೆಯುವುದು ಸಾರ್ವಜನಿಕ ಹಿತದೃಷ್ಟಿಯಿಂದ ಒಳಿತಾದುದು.

ಪಂಡಿತ ನೆಹರೂ ಮತ್ತು ಟಿ. ಟಿ. ಕೆ. ಹಾಗೂ ಇತರರು ಛಾಗ್ಲಾ ಸಮಿತಿಯ ವರದಿಯ ಬಗ್ಗೆ ವ್ಯಕ್ತಪಡಿಸಿರುವ ಪ್ರತಿಕ್ರಿಯೆ ಹಾಗೂ, ಈ ವಿಚಾರಣೆಯಲ್ಲಿ ಅಟಾರ್ನಿ ಜನರಲ್ ಎಂ. ಸಿ. ಸೆಟಲ್‌ವಾಡ್‌ರವರು, ವಹಿಸಿದ ಪಾತ್ರದ ಬಗ್ಗೆ ವ್ಯಕ್ತವಾಗಿರುವ ಟೀಕೆಗಳು, ಇವುಗಳ ಬಗ್ಗೆ ಸ್ಪಷ್ಟನೆ ನೀಡಲು, ಎಂ. ಸಿ. ಸೆಟಲ್‌ವಾಡ್‌ರವರು ರಾಜ್ಯಾಂಗ ಘಟನೆಯ 88ನೇ ನಿಬಂಧನೆಯ ಪ್ರಕಾರ ಲೋಕ ಸಭೆಯಲ್ಲಿ ಹೇಳಿಕೆಯೊಂದನ್ನು ಕೊಡುವರೆಂದು ತಿಳಿದುಬಂದಿದೆ.

ಪಟೇಲರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗುವುದೆಂಬುದು ಇನ್ನೂ ತಿಳಿದುಬಂದಿಲ್ಲ. ಸಧ್ಯದಲ್ಲಿ ಅವರು ರಜೆಯನ್ನು ತೆಗೆದುಕೊಂಡಿದ್ದಾರೆಂದೂ ನಿವೃತ್ತಿಯಾಗಲು ಬಯಸಿರುವರೆಂದೂ ತಿಳಿದುಬಂದಿದೆ. ಸರಕಾರವು ಯಾವ ಕ್ರಮವನ್ನೂ ಇನ್ನೂ ನಿರ್ಧರಿಸಿಲ್ಲ. ಈ ವ್ಯವಹಾರದಲ್ಲಿ ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನೂ ವಿಚಾರಣೆಗೊಳಪಡಿಸಿ ಶಿಕ್ಷಿಸುವುದು ಅಗತ್ಯವಾಗಿದೆ

ಮುಂಧ್ರಾ ಒಬ್ಬರೇ ಹೇಗೆ?

ಹರಿದಾಸ ಮುಂಧ್ರಾರವರನ್ನೇನೋ ಈಗ ಬಂಧಿಸಲಾಗಿದೆ. ಅವರ ಮೇಲೆ ಮೋಸ ಮತ್ತು ಫೋರ್ಜರಿ ಅಪಾದನೆಗಳನ್ನು ಹೊರಿಸಲಾಗಿದೆ. ಅವರ ಕಛೇರಿ ಮತ್ತು ಮನೆಯನ್ನು ವಿಶೇಷ ಪೋಲೀಸರು ಶೋಧಿಸಿದ್ದಾರೆ. ಮುಂಧ್ರಾರವರ ಪೂರ್ವೋತ್ತರಗಳು ಈಗ ಸಾಕಷ್ಟು ಹೊರಬಿದ್ದಿರುವುದರಿಂದ ಅವರ ಇಡೀ ವ್ಯವಹಾರವನ್ನು ವಿಚಾರಣೆಗೆ ಗುರಿಪಡಿಸುವುದು ಅಗತ್ಯವಾಗಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಇದು ಅವಶ್ಯ. ಏಕೆಂದರೆ ಮುಂಧ್ರಾರವರೊಬ್ಬರೇ ಈ ತಿಮಿಂಗಿಲವಾಗಿಲ್ಲವಲ್ಲ! ಅವರಿಗಿಂತ ದೊಡ್ಡವರು ಇದ್ದಾರೆ. ಅವರ ವ್ಯವಹಾರ ಹೊರಗೆ ಬಂದಿಲ್ಲ ಅಷ್ಟೆ. ಸೇಠ್ ರಾಮಕೃಷ್ಣ ದಾಲ್ಮಿಯಾರವರ ವ್ಯವಹಾರದ ಬಗ್ಗೆ ತನಿಖೆ ಎಲ್ಲಿಯ ವರೆಗೆ ಬಂದಿದೆಯೆಂದು ಯಾರಿಗೂ ತಿಳಿಯದು ತಿಂಗಳುಗಳು ಮಾತ್ರ ಒಂದಾದ ಮೇಲೊಂದರಂತೆ ಉರುಳುತ್ತಿವೆ! ಟಾಟಾ, ಬಿರ್ಲಾರಂಥ ದೊಡ್ಡ ದೊಡ್ಡ ಗುತ್ತೇದಾರರ ವ್ಯವಹಾರಗಳಲ್ಲಿ ಇಂಥ ಪ್ರಕರಣಗಳಿಲ್ಲದೇ ಇಲ್ಲ ಎಂದು ಧಾರಾಳವಾಗಿ ಹೇಳಬಹುದು. ಅರ್ಥ ಸಚಿವರಾಗಿದ್ದ ಟಿ.ಟಿ. ಕೆ ಯಂಥ ವ್ಯಕ್ತಿಯೇ ಖಾಸಗೀ ಬಂಡವಾಳಸ್ಥರ ಬಗ್ಗೆ ಹೇಳುತ್ತ ಅವರನ್ನು ನರಭಕ್ಷಕರಿಗೆ ಹೋಲಿಸಿದ್ದಾರೆ! ದೇಶದ ಪ್ರಗತಿಯ ದೃಷ್ಟಿಯಿಂದ, ಸುಭದ್ರವಾದ ಆರ್ಥಿಕ ವ್ಯವಸ್ಥೆಯನ್ನುಂಟುಮಾಡುವ ದೃಷ್ಟಿಯಿಂದ ದೊಡ್ಡ ದೊಡ್ಡ ಖಾಸಗಿ ಉದ್ದಿಮೆಗಳ ವ್ಯವಹಾರದ ಬಗ್ಗೆ ತನಿಖೆ ನಡೆಸುವುದು ಅಗತ್ಯ.

ಸರಕಾರವು ಈಗಲಾದರೂ ಎಚ್ಚತ್ತು ಸೂಕ್ತ ಕ್ರಮ ಕೈಗೊಳ್ಳಲಿ. ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಕಾಲಾವಧಿಯಲ್ಲಿ ಪ್ರಭುತ್ವ ಕ್ಷೇತ್ರವು ವಿಸ್ತಾರಗೊಳ್ಳಲಿರುವುದರಿಂದ, ಖಾಸಗೀ ಕ್ಷೇತ್ರವೂ ಸಹ ವಿಸ್ತಾರಗೊಳ್ಳುವುದರಿಂದ, ಪ್ರಭುತ್ವ ಕ್ಷೇತ್ರದ ವಿಸ್ತರಣೆಗೆ ಸತತವಾಗಿ ವಿರೋಧ

(೫ನೇ ಪುಟ ನೋಡಿ)

ವಿಶೇಷ ಸಮಾಚಾರಗಳು

ಅವಿಶ್ವಾಸ ನಿರ್ಣಯಗಳ ಸುಳಿಯಲ್ಲಿ....

ಇಂದು, ಭೂಸುಧಾರಣಾ ಮಸೂದೆಯ ಗೊಂದಲವನ್ನು ಬಿಟ್ಟರೆ ಕನಿಷ್ಟಪಕ್ಷ ಎರಡು ರಾಜ್ಯಗಳಲ್ಲಿ ಅವಿಶ್ವಾಸ ನಿರ್ಣಯಗಳ ಬಿರುಗಾಳಿ ಎದ್ದಿದೆ.

ಪಂಜಾಬಿನಲ್ಲಿ ಮುಖ್ಯಮಂತ್ರಿ ಕೈರಾನ್‌ರವರನ್ನು ಹೊರದೂಡಲು ಶತಪ್ರಯತ್ನ ನಡೆದಿದೆ. ಸಾಚಾರರ ಗುಂಪಿನ ನಾಯಕ ಶ್ರೀ ಪ್ರಭೋದ್ ಚಂದರ್, ನೆಹ್ರೂರನ್ನು ಈ ಬಗ್ಗೆ ಕಂಡಿದ್ದರು. ಅಲ್ಲದೆ ರೆವಿನ್ಯೂ ಸಚಿವ ಗಯಾನಿ ಕರ್ತಾರ್ ಸಿಂಗ್ ಮತ್ತು ಯೋಜನಾ ಸಚಿವ ಗೋಪಿಚಂದ್ ಭಾರ್ಗವರವರು ಹೈಕಮಾಂಡಿನೊಡನೆ ಈ ಬಗ್ಗೆ ಮಾತುಕತೆ ನಡೆಸಿದ್ದಾರೆ. ಬಹುಶಃ ಈ ಬಾರಿ ಪಂಜಾಬಿನಲ್ಲಿ ಹಿಂದೆ ನಡೆದು ಬಂದ ಸಂಪ್ರದಾಯದಂತೆ ಅವಿಶ್ವಾಸದ ಪರ ಸಹಿಗಳ ಸಂಗ್ರಹ ನಡೆಯದು. ಈಗಿನ ಮುಖ್ಯಮಂತ್ರಿ ಪ್ರತಾಪ ಸಿಂಗ್ ಕೈರಾನ್‌ರವರು ಮಾತ್ರ ಅಸ್ಥಿರ ಅಧಿಕಾರ ಪೀಠದ ಮೇಲೆ ಕುಳಿತಿರುತ್ತಾರೆಂದು ತಿಳಿದು ಬಂದಿದೆ. ಸಧ್ಯದಲ್ಲೇ ಒಂದೆರಡು ದರ್ಜೆ ಕಾಂಗ್ರೆಸ್ ಲೆಜಿಸ್ಲೇಟರುಗಳು, ಎಲ್ಲ ಸಾಕ್ಷ್ಯಗಳು ಆಧಾರಗಳೊಡನೆ ಹೈಕಮಾಂಡನ್ನು ಕಾಣುವರೆಂದೂ, ಆ ಮೇಲೆ ಕೈರ್ರಾನರನ್ನು ಮುಖ್ಯಮಂತ್ರಿ ಪದವಿಯಿಂದ ಕೆಡಿಸಲಾಗುವುದೆಂದೂ ಹೇಳಲಾಗುತ್ತಿದೆ. ಮುಖ್ಯಮಂತ್ರಿ ಮತ್ತವರ ಎದುರು ಗುಂಪಿನ ನಡುವೆ ವೈಷಮ್ಯದ ಕಂದರ ಪರಸ್ಪರ ದಾಟಲಾರದಷ್ಟು ಬೆಳೆದಿದೆಯೆಂದೂ ತಿಳಿಯಲಾಗಿದೆ. ಇನ್ನು ಪಂಜಾಬಿನ ಪೋಲೀಸರು ಈಗೀಗ ಜನರ ಮೇಲೆ ಗುಂಡು ಹಾರಿಸುವುದರಲ್ಲೇ ಸಂತೋಷ ಪಡೆಯುತ್ತಿದ್ದಾರೆಂದೂ, (ಇದಕ್ಕೆ ನಿದರ್ಶನವಾಗಿ ಹೊಷಿಯಾರ್‌ಪುರ್ ಜೈಲಿನಲ್ಲಿ ಕಾರಾಗೃಹಿಗಳ ಮೇಲೂ ಮೊನ್ನೆ ಮೊನ್ನೆ ಹಿಂದಿ ಮೆರವಣಿಗೆಗಾರರ ಮೇಲೂ ನಡೆಸಿದ ಗೋಳಿಬಾರುಗಳೇ ಸಾಕ್ಷಿ.) ಹಾಗೂ ಇನ್ನಿತರ ಆಡಳಿತ ಯಂತ್ರದ ನ್ಯೂನತೆಗಳನ್ನೂ ಕೈರಾನರ ಮೇಲೆಯೇ ಹೇರಲಾಗಿದೆ.

ಯು. ಪಿ.ಯಲ್ಲಿ....

ಎರಡನೆಯದಾಗಿ, ಯು. ಪಿ.ಯಲ್ಲಿ ಈಗಿನ ಮುಖ್ಯಮಂತ್ರಿಯಾಗಿರುವ ಸಂಪೂರ್ಣಾನಂದರನ್ನು ಯು. ಪಿ.ಯ ರಾಜಕೀಯದಿಂದಲೇ ಓಡಿಸುವ ಸಂಚಿನಲ್ಲಿ ಅಲ್ಲಿನ ಏಳೆಂಟು ಕಾಂಗ್ರೆಸ್ ಗುಂಪುಗಳು ಪ್ರಯತ್ನಿಸುತ್ತಿವೆ ಎಂದೂ, ಈ ಪ್ರಯತ್ನದಲ್ಲಿ ಸಾಕಷ್ಟು ಯಶಸ್ವಿಯಾಗಿದೆಯೆಂದೂ ತಿಳಿದು ಬಂದಿದೆ. ಯು. ಪಿ. ಕಾಂಗ್ರೆಸ್ ಸಮಿತಿ ಅಧಿಕಾರ ವರ್ಗಕ್ಕೆ ಚುನಾವಣೆ ನಡೆಯದೇ ಇದ್ದು, ಒಮ್ಮೆ ಮುಖ್ಯಮಂತ್ರಿಗಳಿಂದ ಸೂಚಿತವಾಗಬೇಕೆಂಬ ನಿರ್ಣಯವನ್ನು ಈಗ ಹಿಂತೆಗೆದು, ಪುನಃ ಚುನಾವಣೆ ನಡೆಸಲು ಹಲವಾರು ಗುಂಪುಗಳು ಪ್ರಯತ್ನಿಸುತ್ತಿವೆ ಎಂಬುದನ್ನು ನಮ್ಮ ಕಳೆದ ಸಂಚಿಕೆಯಲ್ಲಿ ಕೊಡಲಾಗಿದೆ.

ಈ ಚುನಾವಣೆಯ ಫಲಿತಾಂಶ ಶ್ರೀ ಸಂಪೂರ್ಣಾನಂದರಿಗೆ ವಿರುದ್ಧವಾಗಿ ಹೊರಬರಬಹುದೆಂದೂ ಸಂಬಲಾಗಿದೆ. ಈ ತೆರೆಯ ಮರೆಯ ಕಾಳಗದಲ್ಲಿ ಪುನಃ ಯು. ಪಿ.ಯ ಕಾಂಗ್ರೆಸ್ಸಿನ 'ಧಣಿ' ಎಂದು ಖ್ಯಾತಿಗೊಂಡ, ಚುನಾವಣೆಯಲ್ಲಿ ಸೋತ ಸಿ. ಬಿ. ಗುಪ್ತಾ ಬೆಳಕಿಗೆ ಬಂದಿದ್ದಾರೆ.

ಮುಂಧ್ರಾ ಪ್ರಕರಣ ....

(೧ನೇ ಪುಟದಿಂದ)

ಹಿರುವ ಜಾಹಗೀ ಬಂಡವಾಳಗಾರರು ಪ್ರಭುತ್ವ ಕ್ಷೇತ್ರಕ್ಕೆ ಕಳಂಕ ತರಲು ಯತ್ನಿಸುತ್ತಾರೆ. ಈ ಪ್ರಯತ್ನವು ತಡೆಯಿಲ್ಲದೆ ಸಾಗುತ್ತಿದೆ. ಇದು ಬಹಳ ಅಪಾಯಕಾರಿಯಾದುದು. ಸಂಸಾರವು ಇದಕ್ಕೆ ಗಮನವಿತ್ತು, ಸರಿಯಾದ ಧೋರಣೆ ಅನುಸರಿಸಲಿ. (19-2-58)

ಮೈಸೂರಿನಲ್ಲಿ....

ಇತ್ತ ನಮ್ಮ ಮೈಸೂರಿನಲ್ಲಾದರೋ ಜತ್ತಿ ಸಮಿತಿ, ಜಾತೀಯತೆ, ಅಧಿಕಾರ ದಾಹ ಮೊದಲಾದ ಎಲ್ಲಾ ಕಾರಣಗಳೂ ಕಾಂಗ್ರೆಸ್ ಗುಂಪು ಯುದ್ಧದಲ್ಲಿ ಬ್ರಹ್ಮಾಸ್ತ್ರಗಳನ್ನಾಗಿ ಪ್ರಯೋಗಿಸಿ, ಹೇಗಾದರೂ ನಿಜಲಿಂಗಪ್ಪನವರನ್ನು ಉರುಳಿಸುವ ಭಗೀರಥ ಪ್ರಯತ್ನ ನಡೆಯುತ್ತಿದೆ. ಸಚಿವರುಗಳು ಪ್ರವಾಸ ಮಾಡುತ್ತಿರುವುದು ಸರಕಾರಿ ಕಾರ್ಯಕ್ಕಾಗಿ ಅಲ್ಲ, ಸ್ವಕಾರ್ಯಕ್ಕಾಗಿ — ಅಂದರೆ ತಮ್ಮ ಗುಂಪಿನ ಉಳಿವಿಗೆ ಬೆಂಬಲ ಪಡೆಯಲು ಎಂದು ಹೇಳಲಾಗುತ್ತಿದೆ.

ಉಪಾಧ್ಯಾಯರುಗಳ ಅನ್ನ ಸತ್ಯಾಗ್ರಹ

ಪಶ್ಚಿಮ ಬಂಗಾಳದಲ್ಲಿ ಸುಮಾರು 70ಕ್ಕೂ ಮೀರಿ ಶಾಲಾ ಉಪಾಧ್ಯಾಯರುಗಳು ಅನ್ನ ಸತ್ಯಾಗ್ರಹ ಆರಂಭಿಸಿದ್ದಾರೆ. ಫೆಬ್ರವರಿ 10ನೇ ತಾರೀಖಿನಿಂದ ಕಲ್ಕತ್ತದಲ್ಲಿ 35 ಶಿಕ್ಷಕರು, ಅಷ್ಟೇ ಇನ್ನಿತರ ಜಿಲ್ಲೆಗಳಲ್ಲೂ ಮುಷ್ಕರ ನಡೆಸಿರುತ್ತಾರೆ. ಆದರೆ ಸರ್ಕಾರ, ಈ ಬಗ್ಗೆ ಮೌನ ವ್ರತ ಆಚರಿಸಿದಂತಿದೆ. ಫೆಬ್ರವರಿ 17ರಂದು ರಾಜ್ಯಪಾಲರು ಅಸೆಂಬ್ಲಿಯನ್ನುದ್ದೇಶಿಸಿ ಮಾತನಾಡುವಾಗ, ಈ ಬಗ್ಗೆ ಚಕಾರ ಎತ್ತಲಿಲ್ಲ.

ಇದನ್ನು ಪ್ರತಿಭಟಿಸಿ, ವಿರೋಧ ಪಕ್ಷದ ಕಮ್ಯೂನಿಸ್ಟ್, ಪಿ.ಎಸ್.ಪಿ. ಹಾಗೂ ಇತರ ಎಲ್ಲಾ ಎಡಪಕ್ಷಗಳು ಸಭಾತ್ಯಾಗ ಮಾಡಿವೆ. ಕಾಂಗ್ರೆಸ್ಸಿನ ಕೆಲವರು ಸರ್ಕಾರದ ಔದಾಸೀನದ ಬಗ್ಗೆ ತಮ್ಮ ಅತೃಪ್ತಿ ಸೂಚಿಸಿದ್ದಾರೆಂದು ತಿಳಿಯಲಾಗಿದೆ.

ಶಿಕ್ಷಕರ ಅನ್ನ ಸತ್ಯಾಗ್ರಹವು ಜನರಲ್ಲಿ ತೀವ್ರ ಪ್ರತಿಕ್ರಿಯೆಯನ್ನು ಉಂಟುಮಾಡಿದೆ. ಈ ಅನ್ನ ಸತ್ಯಾಗ್ರಹವನ್ನು ಶಿಕ್ಷಕರು ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಮುಂದೆ ಪರೀಕ್ಷೆಗೆ ಒಳಗಾಗಬೇಕೆಂಬ ಸರ್ಕಾರದ ನಿಲುವಿನ ವಿರೋಧ ಸೂಚಕವಾಗಿ ಕೈಗೊಳ್ಳಲಾಗಿದೆ. ಈ ಪರೀಕ್ಷೆಗೆ ಒಳಪಟ್ಟ ನಂತರ ಶಿಕ್ಷಕರಿಗೆ ಬಡ್ತಿ ಕೊಡಲಾಗುವುದೆಂಬುದನ್ನು ಶಿಕ್ಷಕರೆಲ್ಲಾ ಉಗ್ರವಾಗಿ ವಿರೋಧಿಸಿದ್ದಾರೆ. ಪಶ್ಚಿಮ ಬಂಗಾಳದ ಸರಕಾರ ಶಿಕ್ಷಕರ ಅನ್ನಸತ್ಯಾಗ್ರಹದತ್ತ ಕಣ್ಣು ಮುಚ್ಚಿ ಕುಳಿತರೆ ಕಲ್ಕತ್ತಾದಲ್ಲಿ ಸಾಮೂಹಿಕ ಪ್ರತಿಭಟನೆ ತೀವ್ರವಾಗುವ ಲಕ್ಷಣಗಳು ಕಾಣುತ್ತಿವೆ.

ಯು. ಪಿ.ಯಲ್ಲಿ ಹೊಟ್ಟೆಗಿಲ್ಲದೆ ಸಾವು

ಯು.ಪಿ.ಯಲ್ಲಿ ಆಹಾರ ಅಭಾವವು ಉಗ್ರ ಮಟ್ಟಕ್ಕೇರುತ್ತಾ ಇದೆ. ಕಳೆದ ವರ್ಷದಿಂದಲೇ ವಿರೋಧ ಪಕ್ಷಗಳು ಈ ಬಗ್ಗೆ ಯು. ಪಿ. ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯ ಧೋರಣೆಯ ವಿರುದ್ಧ, ಉಪವಾಸ ಮುಷ್ಕರ ಕೂಡಾ ಮಾಡಿವೆ. ಆದರೆ ಇನ್ನೂ ಸರ್ಕಾರದ ಕಣ್ಣು ತೆರೆದಂತಿಲ್ಲ. ಬದಲು ಹೊಟ್ಟೆಗಿಲ್ಲದೆ ಜನರು ಸಾಯುವ ವರದಿಯನ್ನು ಕೇಳಿ, ಅದು ಸ್ವಜನ ಮರಣ ಆಹಾರಾಭಾವದಿಂದಲ್ಲ ಎಂದು ಹೇಳುವಷ್ಟು ಅಧಿಕಾರ ಮದ ಹಾಗೂ ಕ್ರೌರ್ಯವನ್ನು ಸರಕಾರ ತೋರಿಸಿದೆ.

ಫೆಬ್ರವರಿ 11ರ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು, ಯು.ಪಿ.ಯಲ್ಲಿ ಹೊಟ್ಟೆಗಿಲ್ಲದೆ ಸತ್ತ ವರದಿಯನ್ನು ಪ್ರಕಟಿಸಿದೆ. ಈ ಬಡ ಕುಟುಂಬವು ಆಹಾರ ಸಿಗದ ಕಾರಣದಿಂದಾಗಿ, ಮಾವಿನ ಹಣ್ಣಿನ ಬೀಜವನ್ನು ತಿಂದುದರ ಫಲವಾಗಿ ಒಬ್ಬನ ಸಾವಾಗಿ ಉಳಿದ ಜನರು ತೀವ್ರ ಅಸ್ವಸ್ಥರಾಗಿರುವರೆಂದು ವರದಿಯಾಗಿತ್ತು. ಇದನ್ನು ವಿರೋಧ ಪಕ್ಷದವರು ಎತ್ತಿ, ಆಹಾರದ ಬಗ್ಗೆ ಸರಕಾರ ತಳೆದಿರುವ ಕೊಲೆಗಡುಕ ಧೋರಣೆಗೆ ಇಂಥಾ ಸಹಸ್ರಾರು ಜನರು ಬಲಿಯಾಗುತ್ತಿದ್ದಾರೆಂದು ಟೀಕೆ ಮಾಡಿದ್ದಾರೆ. ಆದರೆ ಯು.ಪಿ.ಯ ರೆವಿನ್ಯೂ ಸಚಿವರು ಉದ್ಧಟತನವನ್ನು ಪ್ರದರ್ಶಿಸಿ, "ಇದು ಆಹಾರವಿಲ್ಲದೆ ಸತ್ತದ್ದಲ್ಲ" ಎಂದು ಹೇಳಿರುವುದು, ಮಾನವ ದ್ವೇಷಿಯೊಬ್ಬನ ಪ್ರತಿಕ್ರಿಯೆ ಎನ್ನದೆ ವಿಧಿಯಿಲ್ಲ.

ಸರಕಾರಕ್ಕೆ ಮನವಿ ಕೊಡಲು ಪ್ರತಿನಿಧಿಗಳು

ತಾ|| 22ರಂದು ಪ್ರಾಂತ ರೈತಸಂಘದ ರೈತರ ಸಹಿ ಸಂಗ್ರಹಿಸಿದ ಮನವಿಯನ್ನು ಒಪ್ಪಿಸುವ ಶಿಷ್ಟಮಂಡಲದಲ್ಲಿ ದ. ಕ. ಜಿಲ್ಲಾ ರೈತಸಂಘದ ಪರವಾಗಿ ಶ್ರೀ ಕೆ. ಸಂಜೀವ ರೈಯವರು ತೆರಳಿರುತ್ತಾರೆ

ತಾ|| 25ರಂದು ಕೆ. ಪಿ. ಟಿ. ಯು. ಸಿ. ಯು ಕೊಡಲಿರುವ ಮನವಿಯ ಶಿಷ್ಟಮಂಡಲಕ್ಕೆ ದ. ಕ. ಜಿಲ್ಲೆಯಿಂದ ಕನಿಷ್ಟ ಪಕ್ಷ 10 ಮಂದಿಯಾದರೂ ತೆರಳಲಿರುವರು ಎಂದು ತಿಳಿದು ಬಂದಿದೆ.

ಸೋವಿಯತ್ ಯೂನಿಯನಿನಲ್ಲಿ ೧೫,೦೦೦ ಜನರ ಕೆಲಸವನ್ನು ಮಾಡುವ ಯಂತ್ರ !

ಬಯಲು ಗಣಿಯ ಕೆಲಸಕ್ಕಾಗಿ ರೂಪಿಸಲಾಗಿರುವ ಹೊಸದಾದ ನಡಿಗೆಯ ಅಗೆತ ಯಂತ್ರವು ೧೫,೦೦೦ ಜನರ ಕೆಲಸವನ್ನು ಮಾಡುತ್ತದೆ. ಒಂದು ನಿಮಿಷದೊಳಗಾಗಿ ಈ ಯಂತ್ರ ಎರಡು ರೈಲ್ವೇ ಸಾಮಾನು ಗಾಡಿಗಳನ್ನು ತುಂಬುವಷ್ಟು ಕಲ್ಲುಮಣ್ಣುಗಳನ್ನು ಅಗೆದು ತೆಗೆಯಬಲ್ಲುದು. ಅದೇ ವೇಳೆಯಲ್ಲಿ ತನ್ನ ಹಿರಿ ಸೌಟಿನಿಂದ ಅದನ್ನೆಲ್ಲಾ ೨೦೦ ಮೀಟರು ದೂರದಲ್ಲಿ ಸುರಿಯಬಲ್ಲುದು. ಊರಲ್ಸ್ ನಲ್ಲಿಯ ಸ್ವೆರ್ದ್‌ಲೋವ್‌ಸ್ಕ್ ಆರ್ಥಿಕ ಕ್ಷೇತ್ರದಲ್ಲಿ ರಚಿಸಿ, ಕಳೆದ ವರ್ಷ ತಯಾರಿಸಲಾದ ೨೦೦ ಯಂತ್ರಗಳಲ್ಲಿ, ಈ ಸೋಜಿಗದ ಯಂತ್ರ ಒಂದು ಮಾತ್ರವೇ ಆಗಿದೆ.

ಚಿತ್ರ ವಿಮರ್ಶೆ

ಭೂಕೈಲಾಸ—ಭಾಷೆ: ಕನ್ನಡ

ಬೆಂಗಳೂರಿನಲ್ಲಿ ಈಗ ಎರಡು ಚಿತ್ರಗಳು ಯಶಸ್ವಿಯಾಗಿ ನಡೆಯುತ್ತಿವೆ. ಒಂದು ಪೌರಾಣಿಕ ಚಿತ್ರ "ಭೂಕೈಲಾಸ" ಎರಡನೆಯದು ಸಾಮಾಜಿಕ ಚಿತ್ರ "ಸ್ಕೂಲ್ ಮಾಸ್ಟರ್"— ಗೀತಾ ಮತ್ತು ಸೂಪರ್ ಟಾಕೀಸಿನಲ್ಲಿ ನಡೆಯುತ್ತಿದೆ. 'ಭೂಕೈಲಾಸವು' ಬೆಂಗಳೂರಿನ ಸಾಗರ್ ಮತ್ತು ಮಿನರ್ವ ಚಿತ್ರಗೃಹದಲ್ಲಿ ಮೂರನೇ ವಾರಕ್ಕೆ ಕಾಲಿಕ್ಕಿದೆ. ಅಂತೂ ಹಣದ ಗಳಿಕೆಯ ದೃಷ್ಟಿಯಿಂದ ಈ ಚಿತ್ರವು ಯಶಸ್ವಿಯಾಗಿದೆಯೆನ್ನಬೇಕು.

ಚಿತ್ರದ ನಿರ್ದೇಶನ ತಕ್ಕಮಟ್ಟಿಗಿದೆ. ತಾಂತ್ರಿಕ ದೃಷ್ಟಿಯಿಂದಲೂ ಹಿಂದುಳಿದಿಲ್ಲ. ಆಯ್ದು ಕೊಂಡ ಕಥೆಯು ಪ್ರಭಾವಪೂರ್ಣದ್ದುದೇ.

ಧರ್ಮಿಷ್ಠ, ಉಗ್ರಶಿವಭಕ್ತ, ಪ್ರಚಂಡ ಪ್ರತಾಪಿ ರಾವಣನ ಪಾತ್ರದಲ್ಲಿ ರಾಜಕುಮಾರ್ ಅಭಿನಯಿಸಿದ್ದಾನೆ. ಧರ್ಮಿಷ್ಠನಾಗಿಯೂ ಭಕ್ತನಾಗಿಯೂ ರಾಜಕುಮಾರ್ ಉತ್ತಮ ಅಭಿನಯ ನೀಡಿದ್ದಾನೆ. ಆದರೆ ಮಹಾಪ್ರತಾಪಿ ರಾವಣನಾಗಿ ಈತನ ಅಭಿನಯ ಪ್ರಭಾವಶಾಲಿಯಾಗಿ ಬಂದಿಲ್ಲ. ಆದರೂ ರಾಜಕುಮಾರ್ ಕನ್ನಡ ಚಿತ್ರರಂಗದಲ್ಲಿ ಉತ್ತಮ ನಟರಲ್ಲೊಬ್ಬನೆನ್ನಬೇಕು. ನಾರದನಾಗಿ ಕಲ್ಯಾಣ್ ಕುಮಾರ್ ತೃಪ್ತಿ ಇತ್ತಿಲ್ಲ. ಈತನು ಸಾಮಾಜಿಕಕ್ಕೇ ಸರಿ. ಮತ್ತಿತರರ ಅಭಿನಯ ಹೇಳುವುದಕ್ಕೆ ಈ ಕಥೆಯಲ್ಲಿ ಅಷ್ಟೇನೂ ಅವಕಾಶವಿಲ್ಲ.

ಸಂಭಾಷಣೆ ಮಾತ್ರ ಬಹು ಸಾಮಾನ್ಯ ದರ್ಜೆಗೆ ಇಳಿದಿದೆ. ಪೌರಾಣಿಕದಲ್ಲಿ ಇಷ್ಟು ಸಾಮಾನ್ಯ ದರ್ಜೆಯ ಸಂಭಾಷಣೆಯನ್ನು ಬಳಸುವುದು ಯೋಗ್ಯವಲ್ಲ. ರಾವಣ ಹಾಗೂ ನಾರದ ಮಾತನಾಡುವಾಗ ತುಂಬಾ ಸಾಮಾನ್ಯ ಭಾಷೆಯನ್ನು ಬಳಸಲಾಗಿದೆ. ಕನ್ನಡವೆಂಬ ಅಭಿಮಾನದಿಂದ ನೋಡಿದರೆ ಅಷ್ಟೇನೂ ಅತೃಪ್ತಿ ನೀಡದು ಈ ಚಿತ್ರ

ಸ್ಕೂಲ್ ಮಾಸ್ಟರ್

"ಕನ್ನಡದಲ್ಲಿ ಸಾಮಾಜಿಕವಾಗಿ ಒಂದು ಉತ್ತಮ ಚಿತ್ರ—ಸ್ಕೂಲ್ ಮಾಸ್ಟರ್" ಎಂದು ಮೊದಲು ತೀರ್ಪಿಗೆ ಬಂದೆ. ಆರಂಭದಿಂದ ವಿರಾಮದವರೆಗೆ ಈ ಭಾವನೆಯೇ ನನ್ನಲ್ಲಿ ಬೆಳೆಯಿತು. ಆದರೆ ವಿರಾಮದ ನಂತರ ಕಥೆಯ ಓಟವನ್ನು ಕಂಡು, ಉತ್ತಮ ಚಿತ್ರವೊಂದು ಮಧ್ಯಮ ಮಟ್ಟಕ್ಕೆ ಇಳಿಸಲ್ಪಟ್ಟಿತಲ್ಲಾ ಎಂದು ಬೇಸರ ತೋರಿತು. ಕಡಿವಾಣವಿಲ್ಲದ ಕುದುರೆ ನಾಗಾಲೋಟ ಕಿತ್ತಂತೆ 16,000 ರೀಲುಗಳಷ್ಟು ಚಿತ್ರವನ್ನು ನೋಡುವ 'ಭಾಗ್ಯ!'ವನ್ನು ನಮಗೆ ಕರುಣಿಸಲಾಗಿದೆ. ಒಂದು ಪ್ರಭಾವ ಪೂರಿತ ಕಥಾವಸ್ತು, ಪರಿಣಾಮಕಾರಿಯಾದ ಸನ್ನಿವೇಶಗಳು, ಮನವನ್ನು ಸೆಳೆಯುವ ಉತ್ತಮ ಅಭಿನಯ ಇವೆಲ್ಲ ಸ್ಕೂಲ್ ಮಾಸ್ಟರ್ ಚಿತ್ರದಲ್ಲಿದ್ದರೂ ಈ ಚಿತ್ರ ಮಧ್ಯಮ ಎಂದರೆ ವಿರೋಧಾಭಾಸವೆನ್ನಬಹುದು ಕೆಲವರು. ಕಾರಣವಿಷ್ಟೆ: ಅನಗತ್ಯವಾದ ಸರಸ, ಚೆಲ್ಲಾಟಗಳನ್ನು ಕಥೆಯ ಓಟಕ್ಕೆ ಧಕ್ಕೆ ತರುವಷ್ಟು ಮಟ್ಟಿಗೆ ಚಿತ್ರದಲ್ಲಿ ಹೊಂದಿಸಲಾಗಿದೆ. ಕೆಲವು ನೃತ್ಯ ಪದ್ಯಗಳನ್ನು-ತಮಿಳು ಹಿಂದಿಯ ಹೆಜ್ಜೆಯಲ್ಲೆ ಹೆಜ್ಜೆಹಾಕಿ—ಅನವಶ್ಯಕವಾಗಿ ಹಾಕಲಾಗಿದೆಯೆಂದು ತೋರುತ್ತೆ.

ನಟ-ನಿರ್ಮಾಪಕ-ನಿರ್ದೇಶಕ ಬಿ. ಆರ್. ಪಂತುಲುರವರು ಶಾಲಾ ಮಾಸ್ತರರಾಗಿ ಉತ್ತಮ ಹೃದಯಂಗಮ ಅಭಿನಯ ನೀಡಿದ್ದಾರೆ. ಅಂಥಾ ಸೌಮ್ಯ ಗಂಭೀರ, ಕರುಣಾಮಯ ಮಾಸ್ತರರ ಮೇಲೆ ವಿದ್ಯಾರ್ಥಿಗಳಲ್ಲಿ ಗೌರವ ಮೂಡುವುದು ವಿಶೇಷವೇನಲ್ಲ. ತ್ರಿಭಾಷಾ ತಾರೆ ಎಂ. ವಿ. ರಾಜಮ್ಮನ ಅಭಿನಯವೂ ತೃಪ್ತಿಯಾಗಿದೆ. ಉಳಿದ ಸ್ತ್ರೀಪಾತ್ರಗಳು ಅಷ್ಟಕ್ಕಷ್ಟೆ. ನರಸಿಂಹರಾಜು-ಒಬ್ಬನನ್ನು ಬಿಟ್ಟು ಉಳಿದ ಪುರುಷ ಪಾತ್ರಗಳೆಲ್ಲಾ ತೀರಾ ಸಪ್ಪೆ.

ಸಂಭಾಷಣೆಯಲ್ಲಿ ಅಸ್ವಾಭಾವಿಕತೆ ಹಲವೆಡೆ ಮೂಡಿದೆ. ಮಾಸ್ತರರು ದೇಶೋದ್ಧಾರ ಹಾಗೂ ವಿದ್ಯಾರ್ಥಿಗಳ ಕರ್ತವ್ಯದ ವಿಷಯ ಹೇಳುವ ಮಾತುಗಳು, ಶಾಲಾ ಹುಡುಗರ ಬಾಯಲ್ಲಿ ಬರುವ ಕೆಲವು ಮಾತುಗಳು ಹೇಳಿ ನುಡಿಸಿದಂತಿದೆ. ಮನೋರಂಜನೆಯೇ ಧ್ಯೇಯವಾಗಿದ್ದಲ್ಲಿ "ಸ್ಕೂಲ್ ಮಾಸ್ಟರ್" ಉತ್ತಮ ಚಿತ್ರ. ಆದರೆ ಈ ಚಿತ್ರದಿಂದ ಒಂದು ಪಾಠ ಕಲಿಯಲಿದೆ ಅಥವಾ ಶಾಲಾ ಮಾಸ್ತರರ ಸಮಸ್ಯೆ ಬೆಳಕು ಕಂಡಿದೆ ಎಂದು ಯಾರಾದರೂ ಭಾವಿಸಿದರೆ, ಈ ಅಂಶ ಇಲ್ಲಿ ಅಷ್ಟು ಸಫಲವಾಗಿಲ್ಲ.

—"ಪಾಲ್"

ಏಜಂಟರಲ್ಲಿ ವಿನಂತಿ

"ಜನಶಕ್ತಿ" ಬಿಲ್ಲಿನ ಹಣ ಬಾಕಿ ಉಳಿಸಿಕೊಂಡಿರುವವರು ಈ ತಿಂಗಳ ಅಂತ್ಯದೊಳಗಾಗಿ ಹಣವನ್ನು ಪೂರ್ಣ ಸಂದಾಯ ಮಾಡದಿದ್ದಲ್ಲಿ ಪತ್ರಿಕೆಯನ್ನು ಕಳಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸುತ್ತೇವೆ. ಏಜಂಟರುಗಳು ಕೂಡಲೇ ಹಣ ಪಾವತಿ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

20—2—58 ವ್ಯವಸ್ಥಾಪಕರು

ಕೆ. ಜಿ. ಎಫ್.ಗೆ ಮುನಿಸಿಪಲ್ ಆಡಳಿತೆ ನೀಡಬೇಕು

— ಮುಖ್ಯ ಮಂತ್ರಿಯವರಲ್ಲಿ ನಾಗರಿಕ ಸಮಿತಿಯ ಮನವಿ —

ಮೈಸೂರು ಸರಕಾರ ತಾ 1-1-58 ರಂದು ಆಜ್ಞೆ ಹೊರಡಿಸಿ, ಕೆ. ಜಿ. ಎಫ್.ನಲ್ಲಿ ಸ್ಯಾನಿಟರಿ ಬೋರ್ಡ್ ಆಡಳಿತೆಯನ್ನೇ ಮುಂದುವರಿಸಿದೆ. ಅದು ಕೂಡಾ, ತನ್ನ ಬಂಟರಾದ ಕೆಲವು ಕಾಂಗ್ರೆಸ್ಸಿಗರು ಹಾಗೂ ಕೆಲವು ಅಧಿಕಾರಿಗಳನ್ನು ಒಳಪಟ್ಟು ನೇಮಿತಗೊಂಡ ಒಂದು ಅಂಗವಾಗಿದೆ. 9 ಮಂದಿ ಅಧಿಕಾರಿಗಳೂ, 6 ಮಂದಿ ಇತರರೂ ಇರುವ ಸ್ಯಾನಿಟರಿ ಬೋರ್ಡನ್ನು ಒಲ್ಲದ ಕೆ. ಜಿ. ಎಫ್. ನಾಗರಿಕರ ಮೇಲೆ ಒತ್ತಾಯದಿಂದ ಹೇರಲಾಗಿದೆ.

ಈ ಪ್ರಜಾಪ್ರಭುತ್ವ ವಿರೋಧಿ ಹಾಗೂ ಜನದ್ರೋಹೀ ನೀತಿಯನ್ನು ಕೆ.ಜಿ.ಎಫ್. ನಾಗರಿಕರು ಪಕ್ಷ ಪಂಗಡಗಳ ಬೇಧ ತೊರೆದು, ಸಂಘಟಿತರಾಗಿ ಪ್ರತಿಭಟಿಸಿದ್ದಾರೆ. ಹಿಂದೆ ನಡೆಸಲಾದ ಹಾಸ್ಯರೂಪ ಚುನಾವಣೆಯಲ್ಲಿ, ಎಲ್ಲಾ ಪಕ್ಷಪಂಗಡಗಳೂ ಭಾಗವಹಿಸದೆ ತಮ್ಮ ಒಮ್ಮತದ ವಿರೋಧ ಸೂಚಿಸಿರುವುದನ್ನು 'ಜನಶಕ್ತಿ'ಯಲ್ಲಿ ಈ ಹಿಂದೆಯೇ ಕೊಡಲಾಗಿದೆ.

ಸರಕಾರ ಸಾರ್ವಜನಿಕರ ಸಾರ್ವತ್ರಿಕವಾದ ಈ ಪ್ರತಿಭಟನೆಯನ್ನು ಕಡೆಗಣಿಸಿದರೂ ಕೆ. ಜಿ. ಎಫ್. ನಾಗರಿಕರ ಈ ಸಮಿತಿಯು ಕಾಂಗ್ರೆಸ್ಸಿಗರೊಡಗೂಡಿ ಸರ್ವಪಕ್ಷಗಳನ್ನೂ ಜನವಿಭಾಗಗಳನ್ನೂ ಒಳಗೊಂಡಿದೆ. ಶಾಂತವಾಗಿ ಪ್ರತಿಭಟನೆಯನ್ನು ಮುಂದುವರಿಸಲಾಗಿದೆ. ಮುಖ್ಯ ಮಂತ್ರಿಗಳಿಗೂ, ಅಸೆಂಬ್ಲಿಯ ಸರ್ವಸದಸ್ಯರಿಗೂ ಒಂದು ಮನವಿಯನ್ನು ಸಲ್ಲಿಸಲಾಗಿದೆ. ಈ ಮನವಿಯನ್ನು ಕಡೆಗಣಿಸಿದ್ದೇ ಆದಲ್ಲಿ, ಕೆ. ಜಿ. ಎಫ್. ನಾಗರಿಕರು ತಮ್ಮ ನ್ಯಾಯವಾದ ಕೇಳಿಕೆಯನ್ನು ಪಡೆಯಲು ಪ್ರಬಲವಾದ ಹೋರಾಟ ಹೂಡುವುದರಲ್ಲಿ ಸಂಶಯವಿಲ್ಲ.

ಕೆ. ಜಿ. ಎಫ್.ನಂತಹ ಪ್ರಮುಖ ನಗರಕ್ಕೆ ಸ್ಯಾನಿಟರಿ ಬೋರ್ಡು ಅಲ್ಲ, ಮುನಿಸಿಪಾಲಿಟಿಯ ಅಗತ್ಯವಿದೆ ಎಂಬುದನ್ನು ತಿಳುವಳಿಕೆ ಉಳ್ಳ ಯಾರೂ ಅಲ್ಲಗಳೆಯಲಾರರು. ಕೆ. ಜಿ. ಎಫ್.ಗೆ ಮಾತ್ರ ಈ ಸೌಲಭ್ಯವನ್ನು ತಿರಸ್ಕರಿಸಲಾಗಿರುವುದು ರಾಜಕೀಯ ಕಾರಣಗಳಿಂದಲೇ ಎಂದು ನಾಗರಿಕರು ಭಾವಿಸಿದ್ದರೆ ಅದಷ್ಟು ತಪ್ಪಾಗಲಾರದು. 1947ರ ವರೆಗೆ ಕೆ. ಜಿ. ಎಫ್.ನಿಂದಲೇ ಮೈಸೂರು ಖಜಾನೆಗೆ ಅದರ ⅓ರಷ್ಟು ಆದಾಯ ಬರುತ್ತಿತ್ತು. ಗಣಿಗೆ ಸಂಬಂಧಪಟ್ಟ ಆಸ್ತಿಪಾಸ್ತಿಗಳನ್ನು ತೆರಿಗೆಯಿಂದ ವಜಾ ಮಾಡಲ್ಪಟ್ಟಿದ್ದರೂ ಈಗಲೂ ವರ್ಷಕ್ಕೆ ರೂ. 7ಂ ದ 8 ಲಕ್ಷದಷ್ಟು ತೆರಿಗೆಯ ಆದಾಯ ನಾನ್-ಮೈನಿಂಗ್ ಕ್ಷೇತ್ರದಿಂದಲೇ ಬರುತ್ತಿದೆ. ಪರಿಸ್ಥಿತಿಯು ಹೀಗಿದ್ದೂ, ಪ್ರಾಂತದಲ್ಲೇ ಮೂರನೇ ಪ್ರಧಾನ ನಗರವಾಗಿದ್ದೂ, ಕೆ. ಜಿ. ಎಫ್.ಗೆ ಒಂದು ಪ್ರಜಾಪ್ರಭುತ್ವ ಮುನಿಸಿಪಲ್ ಆಡಳಿತೆಯಿಲ್ಲವೆಂಬುದು ಶೋಚನೀಯ ಮಾತ್ರವಲ್ಲ, ಸ್ಥಳೀಯವಾಗಿ ಪ್ರಜಾಪ್ರಭುತ್ವವನ್ನು ಕ್ರೋಢೀಕರಿಸಬೇಕೆಂದು ಹೇಳುತ್ತಾ, ಅದಕ್ಕಾಗಿ ಸಮಿತಿಗಳನ್ನು (ಬಲವಂತ್ ರಾಯ್ ಮೆಹ್ತಾ ಸಮಿತಿಗಳಂಥ) ನಿಯಮಿಸುವ ಕಾಂಗ್ರೆಸ್ಸಿನ ಮುಖಕ್ಕೇ ಮಸಿ ಬಳಿಯುವಂಥಾ ವಿಷಯವಾಗಿದೆ.

ಕೆ. ಜಿ. ಎಫ್.ಗೆ ಒಂದು ಪ್ರಜಾಪ್ರಭುತ್ವ ಮುನಿಸಿಪಾಲಿಟಿ ಬೇಕೆಂಬುದಾಗಿ 12 ವರುಷಗಳಿಂದ ನಾಗರಿಕರು ಒತ್ತಾಯಿಸುತ್ತಾ ಬಂದಿದ್ದಾರೆ. ಇಷ್ಟರ ವರೆಗೆ ಆಗಿ ಹೋದ ಎಲ್ಲಾ ಮಂತ್ರಿಮಂಡಲಗಳ ಮುಂದೆ ಈ ಪ್ರಶ್ನೆ ಬಂದಿದ್ದು ಹಾಗೆಯೇ ತಳ್ಳಲ್ಪಟ್ಟಿದೆ. ಐದು ಬಾರಿ ಈ ಸ್ಯಾನಿಟರಿ ಬೋರ್ಡಿಗೆ ಜೀವದಾನ ಕೊಡಲಾಗಿದೆ. ನಿಜಲಿಂಗಪ್ಪ ಮಂತ್ರಿಮಂಡಲ ಕೂಡಾ ಈ ಹಿಂದಿನ ಪ್ರಜಾಪ್ರಭುತ್ವ ವಿರೋಧಿ ಧೋರಣೆಯನ್ನೇ ಅನುಸರಿಸಿದೆ. 1957ರ ಅಕ್ಟೋಬರಿನಲ್ಲಿ ಮುಖ್ಯ ಮಂತ್ರಿಯವರು ಕೆ. ಜಿ. ಎಫ್. ನಾಗರಿಕರಿಗೆ ಮುಖತಾ ಭರವಸೆ ಇತ್ತು ಈ ಬಗ್ಗೆ ಯೋಗ್ಯ ಕ್ರಮ ವಹಿಸುವರೆಂದು ಹೇಳಿದ್ದಾರೆ.

ಆದರೆ ಕಾರ್ಯದಲ್ಲಿ ತದ್ವಿರುದ್ಧವಾಗಿ ನಡೆದುಕೊಂಡಿರುವುದು ಅವರಿಗೆ ಶೋಭನೀಯವಾದುದಲ್ಲವೆಂದೇ ಹೇಳಬೇಕು. ಇವರೂ ತಮ್ಮ ಬಾಲಬಡುಕರನ್ನೇ ನೇಮಿಸಿ ಖುದ್ದು ಕಾಂಗ್ರೆಸ್ಸಿಗರು ಕೂಡಾ ಈ ನೀತಿಯನ್ನು ವಿರೋಧಿಸಿ, ನಾಗರಿಕ ಸಮಿತಿಯಲ್ಲಿ ಸೇರಿರುವ ಅಂಶವನ್ನಿಲ್ಲಿ ಎತ್ತಿ ತೋರಬೇಕಾಗಿದೆ.

ಅಂತೂ ಮೈಸೂರಿನಲ್ಲಿ, ಕಾಂಗ್ರೆಸ್ ಆಡಳಿತೆಗೆ ಪ್ರಜಾಪ್ರಭುತ್ವದ ಅಗತ್ಯವಿಲ್ಲ. ಸ್ಥಳೀಯವಾಗಿ ಪ್ರಜಾಪ್ರಭುತ್ವ ಆಡಳಿತೆಯನ್ನು ಇಚ್ಛೆಯೇ ಇಲ್ಲ ಎಂಬುವಕ್ಕೆ ನಿದರ್ಶನವಾಗಿ ಕೆ.ಜಿ ಎಫ್. ಮಾತ್ರವಲ್ಲ; ಹಳೇ ಮೈಸೂರಿನಲ್ಲಿ 1951ರಿಂದ ಹಿಡಿದು ಇಂದಿನ ವರೆಗೆ ಜಿಲ್ಲಾ ಬೋರ್ಡಿಗೆ ಚುನಾವಣೆ ನಡೆಸದಿರುವುದು, ದಕ್ಷಿಣ ಕನ್ನಡ, ಮುಂಬಾಯಿ ಕರ್ನಾಟಕ ಮೊದಲಾದೆಡೆಯಲ್ಲಿ ಜಿಲ್ಲಾ ಬೋರ್ಡಿಗೆ ಚುನಾವಣೆ ನಡೆಸದೆ, ಇದ್ದ ಬೋರ್ಡಿಗೆ ಜೀವದಾನವಿತ್ತಿರುವುದೇ ಸಾಕ್ಷಿ. ಭಾಷಾವಾರು ಪ್ರಾಂತ ರಚನೆಯಾಗುವ ಮೊದಲು ಮುಂಬಾಯಿ ಸರಕಾರ ಈ ಜಿಲ್ಲಾ ಬೋರ್ಡು ಚುನಾವಣೆಯಾಗಬೇಕೆಂದು ಮಾಡಿದ ಮಸೂದೆಯನ್ನು ತಿದ್ದುಪಡಿಗೊಳಿಸಲು ಮೈಸೂರು ಸರಕಾರ ಹಿಂದುಮುಂದು ನೋಡಲಿಲ್ಲ. ಮುಂಬಾಯಿ ಕರ್ನಾಟಕಕ್ಕೆ ಹೊಂದಿಕೊಂಡಿರುವ ಮಹಾರಾಷ್ಟ್ರ ಪ್ರದೇಶದಲ್ಲಿ ಜಿಲ್ಲಾ ಬೋರ್ಡಿಗೆ ಚುನಾವಣೆಗಳು ಈಗಾಗಲೇ ನಡೆದಿರುವುದನ್ನು ಇಲ್ಲಿ ಉಲ್ಲೇಖಿಸುತ್ತೇವೆ. ಆದರೂ ಮೈಸೂರು ಸರಕಾರ ಇಡೀ ಕರ್ನಾಟಕಕ್ಕೆ 'ಸಮನ್ವಯ ಶಾಸನ' ಎಂಬ ಕುಂಟು ನೆಪವನ್ನೊಡ್ಡಿ ಈ ಸ್ಥಳೀಯ ಸಂಸ್ಥೆಗಳನ್ನು ಪ್ರಜಾಪ್ರಭುತ್ವ ಆಡಳಿತೆಯಿಂದ ಹೊರಗಿಡಲು ಸರ್ವ ಸಾಹಸ ಮಾಡುತ್ತಿದೆ. 'ನಾಚಿಕೆ ಕೆಟ್ಟವ ಊರಿಗೆ ದೊಡ್ಡವ' ಎಂಬಂತೆ ನಮ್ಮ ಸರಕಾರ ಏನೋ ಹೇಗೋ ಮಾತಾಡುತ್ತಿದೆ. ಸರಕಾರದ ಸುಳ್ಳು ನೆಪಗಳು ಜನರನ್ನು ಮೋಸಗೊಳಿಸವು. ತಕ್ಷಣವೇ ಜಿಲ್ಲಾ ಬೋರ್ಡುಗಳ ಹಾಗೂ ಇತರ ಸಂಸ್ಥೆಗಳ ಚುನಾವಣೆ ನಡೆಸಲು ಸರಕಾರ ಮುಂಬರಲಿ. ಕೆ. ಜಿ. ಎಫ್. ನಾಗರಿಕರ ಮನವಿಗೆ ಮನಗೊಟ್ಟು ಕೂಡಲೇ ಸೂಕ್ತ ಹೆಜ್ಜೆಗಳನ್ನು ಕೈಗೊಂಡು ಕ್ರಮವಾದ ಪ್ರಜಾಪ್ರಭುತ್ವ ರೀತಿಯ ಚುನಾವಣೆಗಳಾಗಲಿ. ಇಲ್ಲವಾದಲ್ಲಿ ನಾಗರಿಕರು ಹೋರಾಟದ ಹಾದಿಯನ್ನು ತುಳಿಯಬೇಕಾದೀತು.

ರೈತರಂಗ

ಬಂಗಾರಪೇಟೆ ತಾಲ್ಲೂಕಿನಲ್ಲಿ

ರೈತರ ಪ್ರತಿಭಟನಾ ವಾರ

ಕ್ಯಾಸಂಬಳ್ಳಿ ಹೋಬಳಿ ಜೋಡಿ ಮೊಲ್ಲಪಲ್ಲಿ ಗ್ರಾಮದಲ್ಲಿ ರೈತರ ಪ್ರತಿಭಟನಾ ವಾರವನ್ನು ತಾ. 15—2—58ರಲ್ಲಿ ಆಚರಿಸಲಾಯ್ತು. ಕೋಲಾರ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿ ಕಾರ್ಯದರ್ಶಿಗಳು ಮತ್ತು ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಮತ್ತು ಇತರ ರೈತ ಸಂಘದ ಕಾರ್ಯಕರ್ತರು ಭಾಷಣ ಮಾಡಿ, ಸರಕಾರದ ರೈತದ್ರೋಹಿ ನೀತಿಯನ್ನು ಉಗ್ರವಾಗಿ ಖಂಡಿಸಿದರು.

ಕೋಲಾರ ಜಿಲ್ಲೆಯಲ್ಲಿ ಮಳೆಯಭಾವದಿಂದ ಬೆಳೆ ನಷ್ಟವಾಗಿದ್ದರೂ ಸಹ ಪರಿಹಾರ ಕಾರ್ಯಗಳನ್ನು ಪ್ರಾರಂಭಿಸಿರುವುದಿಲ್ಲ ಮತ್ತು ಕಂದಾಯವನ್ನು ಮಾಫಿ ಮಾಡುವುದಾಗಲೀ ಅಥವ ರೆಮಿಷನ್ ಮಾಡುವ ಕ್ರಮ ಕೈಗೊಂಡಿರುವುದಿಲ್ಲ.

ಜಮೀನ್‌ದಾರಿ, ಜೋಡಿ, ಇನಾಂ ಪದ್ಧತಿಯನ್ನು ರದ್ದುಪಡಿಸಿಲ್ಲ ಮತ್ತು ಬಡ ರೈತರನ್ನು ಒಕ್ಕಲೆಬ್ಬಿಸುತ್ತಿರುವ ಮತ್ತು ಒಕ್ಕಲೆಬ್ಬಿಸಿದ ಜಮೀನಿನಲ್ಲಿ ತಮ್ಮ ಇಷ್ಟದಂತೆ ತೋಪು, ತೆಂಗು ಮುಂತಾದುವನ್ನು ಬೆಳೆಸುವುದಕ್ಕೆ ಪ್ರಯತ್ನಿಸುತ್ತಿರುವ ಭೂಸ್ವಾಮಿಗಳಿಗೆ ಪ್ರೋತ್ಸಾಹ ನೀಡುತ್ತಿದೆ ಯೆಂಬ ತೀರ್ಮಾನಕ್ಕೆ. ಈ ಸರ್ಕಾರದ ಜೋಡಿ ಇನಾಂ ರದ್ದಿಯಾತಿ ಕಾನೂನು ಜಾರಿಗೆ ತರಲು ಉದಾಸೀನ ಮಾಡುತ್ತಿರುವುದು ಸಾಕ್ಷಿಯಾಗಿದೆ.

ಮೊಲ್ಲಪಲ್ಲಿ ಜೋಡಿದಾರರು ಬಡರೈತರ ಮೇಲೆ ತಪ್ಪು ಕೇಸುಗಳನ್ನು ಹಾಕಿ ರೈತರನ್ನು ಗೋಳಾಡಿಸುತ್ತಿರುವುದನ್ನು ತಡೆಗಟ್ಟಲು ಅನೇಕ ಸಲ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಯಾವ ವಿಧವಾದ ಕ್ರಮವನ್ನೂ ಜೋಡಿದಾರರ ಮೇಲೆ ತೆಗೆದುಕೊಂಡಂತೆ ಕಂಡುಬರುತ್ತಿಲ್ಲ.

ಅನಾವಶ್ಯಕವಾಗಿ ಈ ಜಿಲ್ಲೆಯಲ್ಲಿ ರೈತ ಸಂಘದ ಕಾರ್ಯಕರ್ತರನ್ನು ದಬ್ಬಾಳಿಕೆಗೊಳಪಡಿಸುತ್ತಿರುವ ಮತ್ತು ಜತ್ತಿ ಸಮಿತಿ ವರದಿಯನ್ನು ಹತ್ತಿಕ್ಕಲು ಹವಣಿಸುತ್ತಿರುವ ದೊಡ್ಡ ದೊಡ್ಡ ಭೂಸ್ವಾಮಿಗಳ ಹಂಚಿಕೆಗೊಳಗಾಗುತ್ತಿರುವ ಸರ್ಕಾರದ ನೀತಿ ಖಂಡನೀಯ. ರೈತರು ಸಂಘಟನೆಯನ್ನು ಬೆಳೆಸಿ ಈ ಪ್ರಗತಿ ವಿರೋಧಿ ಕಾರ್ಯಗಳನ್ನು ಎದುರಿಸಲು ಸಿದ್ಧರಾಗಬೇಕಾಗಿ ಕೋರಲಾಯಿತು ಮತ್ತು ಬೆಂಗಳೂರಿನಲ್ಲಿ ಆಚರಿಸಲಾಗುವ ಪ್ರತಿಭಟನಾ ವಾರದಲ್ಲಿ ಪಾಲ್ಗೊಳ್ಳಲು ಮೊಲ್ಲಪಲ್ಲಿಯಿಂದ ಇಬ್ಬರು ಪ್ರತಿನಿಧಿಗಳನ್ನು ಚುನಾಯಿಸಲಾಯಿತು.

ಸಕಲವಾರ ಗ್ರಾಮ ರೈತ ಸಂಘದ ವಾರ್ಷಿಕೋತ್ಸವ

ಆನೆಕಲ್ ತಾಲೂಕು ಜಿಗಣೆ ಹೋಬಳಿ ಸಕಲವಾರ ಗ್ರಾಮದ ರೈತ ಸಂಘದ ಮೂರನೆ ವಾರ್ಷಿಕೋತ್ಸವವು 16—2—58 ರಂದು ಶ್ರೀ ಟಿ. ಕೆ. ಗಂಗಿ ರೆಡ್ಡಿ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕೋಲಾರ ಜಿಲ್ಲೆ, ಆನೇಕಲ್, ಬೆಂಗಳೂರು ದಕ್ಷಿಣ ಮತ್ತು ಉತ್ತರ ತಾಲೂಕು, ಹೊಸಕೋಟೆ ತಾಲೂಕುಗಳಲ್ಲಿ ಮಳೆ ಬಾರದ್ದರಿಂದ ಬೆಳೆ ನಷ್ಟವಾಗಿ ಕ್ಷಾಮದ ಪರಿಸ್ಥಿತಿ ಉಂಟಾಗಿದೆ ಎಂದರು. ಈ ಪ್ರದೇಶಗಳ ರೈತರ ಸ್ಥಿತಿ ತುಂಬಾ ಕಷ್ಟವಾಗಿರುತ್ತದೆ. ಸರಕಾರವು ಯೋಗ್ಯ ಪರಿಹಾರ ಕ್ರಮಗಳನ್ನು ನಡೆಸಬೇಕೆಂದು ಕೇಳಿಕೊಂಡರು. ರೈತರು ಒಗ್ಗಟ್ಟಾಗಬೇಕು, ರೈತ ಸಂಘವನ್ನು ಬಲಪಡಿಸಬೇಕು ಎಂದು ವಿನಂತಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಬಿ. ವಿ. ಕಕ್ಕಿಲ್ಲಾಯರು ಭೂಸುಧಾರಣೆಯನ್ನು ಅಲಕ್ಷಿಸುವ ಸರಕಾರದ ಧೋರಣೆಯನ್ನು ಟೀಕಿಸಿ, ಯೋಗ್ಯ ಭೂಶಾಸನವನ್ನು ಬೇಗನೆ ಜಾರಿಗೆ ತರಬೇಕೆಂದು ಸರಕಾರವನ್ನು ಕೇಳಿಕೊಂಡರು. ಕರ್ನಾಟಕದ ಆದ್ಯಂತವಾಗಿ ರೈತರು ಸಂಘಟಿತರಾಗಬೇಕೆಂದು ವಿನಂತಿಸಿದರು. ಸಭೆಯಲ್ಲಿ 2,500ಕ್ಕಿಂತ ಹೆಚ್ಚು ರೈತರು ಭಾಗವಹಿಸಿದ್ದರು. ಸಕಲವಾರ ಗ್ರಾಮದ ಯುವಕರಿಂದ ರಾಮಾಯಣ ಸುಂದರ ಕಾಂಡ ಬಯಲು ನಾಟಕ ಅಭಿನಯಿಸಲ್ಪಟ್ಟಿತು. ಸಂಘದ ಕಾರ್ಯದರ್ಶಿ ಶ್ರೀ ಸೀತಾರಾಮ ರೆಡ್ಡಿಯವರು ಧನ್ಯವಾದಗಳನ್ನು ಅರ್ಪಿಸಿದರು.

ದ. ಕ. ಜಿಲ್ಲಾ ರೈತ ಸಂಘದ ಕಾರ್ಯಕಾರೀ ಸಮಿತಿಯ ಸಭೆ

ಇದೇ ತಾ. 7—2—58ರಂದು ದ. ಕ. ಜಿಲ್ಲಾ ರೈತ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಸಂಘದ ಕೇಂದ್ರ ಕಛೇರಿಯಲ್ಲಿ ಶ್ರೀ ಎ. ಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಎಂ. ಎಚ್. ಕೃಷ್ಣಪ್ಪನವರು ಚಟುವಟಿಕೆಗಳ ವರದಿಕೊಡುತ್ತಾ ಪ್ರಾಂತ ರೈತ ಸಂಘದ ಮನವಿಗೆ ಜಿಲ್ಲೆಯಲ್ಲಿ ಒಟ್ಟು ಹನ್ನೊಂದು ಸಾವಿರ ಸಹಿ ಸಂಗ್ರಹಿಸಲಾಗಿದೆಯೆಂದೂ, ಇನ್ನೂರಕ್ಕೆ ಮೇಲ್ಪಟ್ಟು ನ್ಯಾಯಗೇಣಿ ಅರ್ಜಿಗಳನ್ನು ದಾಖಲು ಮಾಡಲಾಗಿದೆಯೆಂದೂ, ಭೂಮಾಲಕರು ಒಕ್ಕಲುಗಳಿಗೆ ಕಿರುಕುಳ ಕೊಟ್ಟು ರೈತ ಸಂಘದ ಕಾರ್ಯಕರ್ತರ ಮೇಲೆ ಸುಳ್ಳು ದಾವೆ ಹೂಡುತ್ತಿರುವ ಪ್ರಸಂಗಗಳು ಹೆಚ್ಚುತ್ತಿವೆಯೆಂದೂ ತಿಳಿಸಿದರು. ವರದಿಯ ಮೇಲೆ ಚರ್ಚೆ ನಡೆದು ಪ್ರಾಂತ

(೯ನೇ ಪುಟ ನೋಡಿ)

ದೃಶ್ಯ ೫

(ಕಂಟ್ರಾಕ್ಟರ್ ರಾಮಪ್ಪನ ಬಂಗ್ಲೆ. ಗೋಪಿ ಸೋಫಾದಲ್ಲಿ ಕುಳಿತುಕೊಂಡು ಒಂದು ಪತ್ರಿಕೆ ಓದುತ್ತಿದ್ದಾಳೆ. ಸ್ವಲ್ಪ ತಡೆದು, ಹೊರಗೆ ನೋಡುತ್ತಾಳೆ. ಯಾರೋ ಬಂದುದನ್ನು ಕಂಡು ಎದ್ದು ಬಾಗಿಲಿನ ಹತ್ತಿರ ಹೋಗುತ್ತಾಳೆ.)

ಗೋಪಿ: ಒಳಗೆ ಬಾಮ್ಮ! ಅಂಗಳದಲ್ಲೇ ನಿಂತಿದ್ದೀಯಲ್ಲ?

ಬೊಳ್ಳಿ: (ಹೊರಗಿನಿಂದ) ಬೇಡವ್ವ. ಇಲ್ಲೇ ಇರ್ತೀನಿ.

ಗೋಪಿ: ಒಳಗೆ ಬಾಂದ್ರೆ! ಇಲ್ಲಿ ಯಾರೂ ಇಲ್ಲ—ಬಾ!

ಬೊಳ್ಳಿ: ಅಯ್ನೋರು.........

ಗೋಪಿ: ಅವರು ಈಗೆಲ್ಲಿ ಬರ್ತಾರೆ? ನೀನ್ ಬಾ ಇಲ್ಲಿ—ಹೇಳ್ತೀನಿ.

(ಬೊಳ್ಳಿ ಮೆಲ್ಲಗೆ ಒಳಗೆ ಬರುತ್ತಾಳೆ. ಕೆಲಸದಲ್ಲಿಂದ ಬರುವ ವೇಷ)

ಗೋಪಿ: (ನಗಾಡುತ್ತ) ಏನೇ? ಭಾರೀ ಸಂಘದವಳಾದ ಮೇಲೂ ಸಂಕೋಚ ಬಿಟ್ಟಿಲ್ವೇನೆ? ಇಲ್ಲಿ ಕೂತ್ಕೊ. (ಸೋಫದಲ್ಲಿ ಕೂತುಕೊಳ್ಳಿಸುತ್ತಾಳೆ).

ಬೊಳ್ಳಿ: (ಸಂಕೋಚದಿಂದ) ಅಯ್ಯೋ—ಬೇಡವ್ವ! ನಾ ನಿಂತ್ಕೋತಿನಿ. (ಏಳುತ್ತಾಳೆ)

ಗೋಪಿ: ಬೊಳ್ಳಿಯನ್ನು ತಿರುಗಿ ಕೈಹಿಡಿದು ಕೂತುಕೊಳ್ಳಿಸಿ) ಸುಮ್ನೆ ಕೂತ್ಕೊ! (ಒಳಗೆ ನೋಡಿ) ಸುಬ್ಬಾ—ಏ ಸುಬ್ಬಾ!

ಸುಬ್ಬ: (ಒಳಗಿಂದ) ಓ—ಬಂದೇ.

ಗೋಪಿ: ಎರಡು ಲೋಟ ಕಾಫಿ ಮಾಡಿ ತಗೊಂಬಾ.

ಸುಬ್ಬ: (ಒಳಗಿಂದಲೆ) ಆಗ್ಲಮ್ಮಾ..

(ಗೋಪಿ ಬೊಳ್ಳಿಯ ಹತ್ತಿರ ಕೂತುಕೊಳ್ಳುತ್ತಾಳೆ. ಬೊಳ್ಳಿ ಪಕ್ಕನೆ ಏಳುತ್ತಾಳೆ. ಗೋಪಿ ಅವಳ ಕೈಹಿಡಿದು ಎಳೆದು ಕೂತುಕೊಳ್ಳಿಸುತ್ತಾಳೆ).

ಗೋಪಿ: ಈವತ್ತು ನೀನು ಕೆಲ್ಸಕ್ಕೆ ಹೋಗಿಲ್ವೆ?

ಬೊಳ್ಳಿ: ಹೋಗಿದ್ದೆ. ಈವತ್ತು ಹೆಂಗಸ್ರಿಗೆ ಅರ್ಧ ಹಾಜರೀಂತಂದು ಬಿಟ್‌ಬಿಟ್ರು. ನಾಳೆಯಿಂದ ಕೆಲ್ಸ ಆರು ಮೈಲಿ ದೂರವ್ವ.

ಗೋಪಿ: ಅಷ್ಟು ದೂರ ಹೆಂಗೆ ಹೋಗ್ತೀರಪ್ಪ?

ಬೊಳ್ಳಿ: ಹೆಂಗಂದ್ರೆ! ಕೆಲ್ಸ ಬೇಕಿದ್ರೆ ಹೋಗ್ಬೇಕು—ಎಷ್ಟು ದೂರ ಆದ್ರೂನು.

ಗೋಪಿ: ನಾಳೆಯಿಂದ ನಿವೆಲ್ಲ ಕೆಲ್ಸ ಬಿಟ್ಟು ಬರ್ವಾಗ ರಾತ್ರಿ ಆಗ್ತದೆ. ನಿಮ್ಮ ಹಾಡು ನಡ್ಯೋದಿಲ್ಲ. ನೀನೊಂದು ಹಾಡು ಹೇಳು ನೋಡಾನ!

ಬೊಳ್ಳಿ: ಇಲ್ಲಿ ಕುಂತು ಹಾಡೋದೆ? ಊಂ—ಊಂ!

ಗೋಪಿ: ಹಾಡೇ—ಹೆದರ್ಕೋಬೇಡ.

ಬೊಳ್ಳಿ: ಸಂಜೆ ನೀವೇ ನಮ್ ಕೇರೀಕಡೆ ಬಂದ್‌ಬಿಡ್ರವ್ವ. ನಾವೆಲ್ಲಾ ಕೂಡಿ ಹಾಡ್ತೀವಿ.

ಗೋಪಿ: ಆದಾಗಲ್ಲ! ಯಜಮಾನ್ರು ಬಂದ್ಬಿಡ್ತಾರೆ. ಒಂದೇ ಒಂದು ಹಾಡು ಸಾಕು—ಹುಂ—ಶುರುಮಾಡು.

ಬೊಳ್ಳಿ: ಯಾವ ಹಾಡು?

ಗೋಪಿ: (ಸ್ವಲ್ಪ ಯೋಚನೆಮಾಡಿ) "ನಾವೆಲ್ಲಾ ಒಂದೇ"—ಹಾಡು.

ಬೊಳ್ಳಿ: ಜೊತೆಗೆ ನೀವೂ ಹಾಡ್ಬೇಕು.

ಗೋಪಿ: ಆಗ್ಲಿ.

(ಬೊಳ್ಳಿ ಹಾಡುತ್ತಾಳೆ. ಗೋಪಿಯೂ ಅವಳ ಜೊತೆಗೂಡಿ ಹಾಡುತ್ತಾಳೆ. ಹಾಡು ಮುಗಿಯಿತು).

ಗೋಪಿ: ನೀವೇನೋ ನಾಟಕ ಅಭ್ಯಾಸ ಮಾಡ್ತಿದೀರಂತೆ?

ಬೊಳ್ಳಿ: ಹೌದವ್ವ. ಮುಂದಿನ ತಿಂಗಳು ಆಡ್ತೇವೊಂತಿದೀವಿ.

ಗೋಪಿ: ನೋಡೋದಕ್ಕೆ ನಾನೂ ಬರ್ತೀನಿ.

ಬೊಳ್ಳಿ: ನೋಡೋಕೆ ಬಂದ್ರೆ ಸಾಲ್ದವ್ವ. ... ಅಲ್ಲಿ ಒಂದು ಡಾನ್ಸ್ ಮಾಡ್ಬೇಕು, ಅಪ್ಪ ಅಮ್ಮನೋರ್ನ ಕೇಳಿ ಒಪ್ಪಿಸ್ತಾನಂತೆ!

ಗೋಪಿ: ಅವರು ಒಪ್ಪೋದು! ಮದ್ವೆ ಆಗಿ ಗಂಡನ ಮನೆಗೆ ಬಂದ್ಮೇಲೆ ಅದೊಂದೂ ಬೇಡಾಗಿದೆ. ಹೆಂಡ್ತಿ ಗೂಡಿನೊಳಗೆ ಗಿಣಿಯಂಗೆ ಇರ್ಬೇಕೊಂತ ಯಜಮಾನ್ರ ಇಷ್ಟ.

ಬೊಳ್ಳಿ: ಅದ್ಯಾಕ್ರವ್ವ?

ಗೋಪಿ: ಯಾಕೋ—ಏನೋ—ಅವರ ಇಷ್ಟ ಹಂಗೆ!

(ಒಳಗೆ ನೋಡಿ) ಸುಬ್ಬಾ-ಕಾಫಿ ಆಗ್ಲಿಲ್ವೆ?

ಸುಬ್ಬ: (ಒಳಗಿಂದ) ಆಗೋಯ್ತಮ್ಮಾ ಒಂದ್ ನಿಮಿಷ.

ಗೋಪಿ: ಶಾಸ್ತ್ರೀಂತ ಒಬ್ಬ ನಿನ್ನ ಕೇಳ್ತಿದಾರಂತೆ—ಹೌದೇನೆ?

ಬೊಳ್ಳಿ: (ಮುಖ ಕೆಳಗೆ ಹಾಕಿ ಮೌನವಾಗುತ್ತಾಳೆ.)

ಗೋಪಿ: ನಿಂಗೆ ಒಪ್ಪಿಗೇನಾ?

ಬೊಳ್ಳಿ: (ಮುಖ ಎತ್ತದೆ) ಇಲ್ಲ.

ಗೋಪಿ: ಆತ ದೊಡ್ಡ ಮುಖಂಡಾಂತಾರೆ! ನಿನ್ನ ಕೊಡಿಸ್ಬೇಕೊಂತ ಯಜಮಾನ್ರನ್ನು ಕೇಳಿದಾರೆ. ಯಾಕಾಗ್ಬಾರ್ದು?

ಬೊಳ್ಳಿ: ನಾನಾಗೋಲ್ಲ.

ಗೋಪಿ: ಹಂಗಾದ್ರೆ ಬೇಡ! ನಿನ್ನಪ್ಪನಿಗೂ ಹೇಳಿಬಿಡು—ಆ ಮಾತು ಎತ್ಬೇಡಾಂತ.

(ರಾಜು ಮೆಲ್ಲಗೆ ಒಳಗೆ ಬರುತ್ತಾನೆ. ಬೊಳ್ಳಿಯನ್ನು ಕಂಡು ಒಂದು ನಿಮಿಷ ಅವಳನ್ನೆ ತೀಕ್ಷ್ಣವಾಗಿ ನೋಡುತ್ತಾನೆ. ಬೊಳ್ಳಿ ಹೌಹಾರಿ ಎದ್ದು ಓಡಿಹೋಗಲು ದಾರಿ ನೋಡುವವಳಂತೆ ನಿಲ್ಲುತ್ತಾಳೆ.)

ರಾಜು: ಓಹೋ! ಸವಾರಿ ಇಲ್ಲಿ ತನಕಾನೂ ಬಂತಾ?

ಗೋಪಿ: (ವಿನಯದಿಂದ) ಅವಳನ್ನು ನಾನೇ ಬರಹೇಳಿದ್ದು.

ನೋಡುತ್ತಿದ್ದಾಳೆ. ಒಂದು ಕ್ಷಣ ಕಳೆಯಿತು. ರಾಜು ಯಾವ ಗೊಡವೆಯೂ ಇಲ್ಲದವನಂತೆ ಅವಳ ಕೈಯಿಂದ ಲೋಟ ತೆಗೆದುಕೊಳ್ಳುತ್ತಾನೆ. ಗೋಪಿಯ ಮುಖದಲ್ಲಿ ಪ್ರಸನ್ನತೆ ಮಿಂಚುತ್ತದೆ. ಅಷ್ಟರಲ್ಲಿ ರಾಜು ಕಾಫಿಯನ್ನು ಅಂಗಳಕ್ಕೆ ಚೆಲ್ಲಿ ಲೋಟವನ್ನು ಮೇಜಿನ ಮೇಲಿಡುತ್ತಾನೆ. ಗೋಪಿ ವ್ಯಸನ, ಅಪಮಾನ, ಕೋಪ ಎಲ್ಲ ಕಲೆತ ಮುಖಭಾವದಿಂದ ರಾಜುವಿನ ಮುಖವನ್ನೆ ತೀಕ್ಷ್ಣವಾಗಿ ನೋಡಿ ನಿಲ್ಲುತ್ತಾಳೆ.)

ರಾಜು: ನಾನು ಕುಡಿಯೋದು—ಹೆಂಡ ಮಾತ್ರ! ಇಲ್ಲಾಂದ್ರೆ—ಬಟ್ಲಿ ಶರಾಬು!

ಗೋಪಿ: (ಕೋಪದಿಂದ) ಅದಕ್ಕೆ ಇಲ್ಲಿಗೆ ಬರಬೇಕಾಗಿಲ್ಲ. ಅದೇನೂ ಇಲ್ಲಿ ಮಾರೋಲ್ಲ.

ರಾಜು: (ವ್ಯಂಗ್ಯವಾಗಿ) ಅಲ್ವೆ ಮತ್ತೆ? ಮಹಾ ಯೋಗ್ಯರ ಮನೆಯಲ್ವೆ ಇದು!

ಗೋಪಿ: (ಕೋಪ ಮತ್ತು ವ್ಯಸನ ಬೆರೆತ ಮಟ್ಟಿನಲ್ಲಿ) ನಾವು ಯೋಗ್ಯರೋ, ಅಯೋಗ್ಯರೋ ಏನೇ ಇರ್ಲಿ—ಕಾಲು ಕೆದರಿ ಧೂಳೆಬ್ಬಿಸೋದಿಲ್ಲ.

ರಾಜು: (ತಮಾಷೆ ಸ್ವರದಲ್ಲಿ) ನಾನು ಬೇವಾರ್ಸಿ ಅಲ್ವೆ?

(ಯಾರೋ ಮಾತನಾಡುತ್ತ ಬರುವ ಶಬ್ದ ಕೇಳುತ್ತದೆ. ಗೋಪಿ ಮುಖ ಒರಸಿಕೊಂಡು ಭಾವ ಬದಲಾಯಿಸಲು ಪ್ರಯತ್ನಿಸುತ್ತಾಳೆ. ನಾರಾಯಣಪ್ಪ ಮತ್ತು ಶಾಸ್ತ್ರಿ ಮಾತನಾಡುತ್ತ ಪ್ರವೇಶಿಸುತ್ತಾರೆ.)

ನಾರಾಯಣಪ್ಪ: ಅದೆಲ್ಲ ನಾ ಮಾಡಿಸ್ತೀನಿ! (ಶಾಸ್ತ್ರಿಯನ್ನು ಬೆರಳಿಂದ ತಿವಿದು) ಏನಂತೀರಾ—ಮಾಡಿಸ್ತೀನೀಂತ! (ಮಾತು ಮುಗಿಸುತ್ತಲು ರಾಜುವನ್ನು ಕಂಡು ತಟಕ್ಕನೆ ನಿಲ್ಲುತ್ತಾನೆ) ಯಜಮಾನ್ರಿಲ್ಲ—ಬನ್ನಿ ಹೋಗೋಣ

ಮನೆ ಮುರಿದ ಮಗ

(ಸಾಮಾಜಿಕ ನಾಟಕ)

ಮೂಲ: **ಶ್ರೀ ತೋಪಿಲ್ ಭಾಸಿ.** ಅನುವಾದ: **ಪಂಡಿತ್.**

(ಕಳೆದ ಸಂಚಿಕೆಯಿಂದ ಮುಂದುವರಿದುದು)

ರಾಜು: (ಬೊಳ್ಳಿಯನ್ನೆ ದುರುಗುಟ್ಟಿ ನೋಡುತ್ತ) ನನ್ ಕೈಯಿಂದ ಏಟ್ ತಿನ್ಬೇಕಾಂದ್ರೆ ನಡಿ—ಹೂಂ!

(ಬೊಳ್ಳಿ ಮೆಲ್ಲ ಮೆಲ್ಲಗೆ ಹಿಂದಕ್ಕೆ ಸರಿಯುತ್ತ ಮರೆಯಾಗುತ್ತಾಳೆ. ರಾಜು ಮುಂದೆ ಬಂದು ಒಂದು ಕುರ್ಚಿ ಎಳೆದು ಕುಳಿತುಕೊತ್ತಾನೆ.)

ರಾಜು: ಯಜಮಾನ್ರ ಸವಾರಿ ಚಿತ್ತೈಸಿಲ್ವೆ?

ಗೋಪಿ: ಇನ್ನೂ ಬಂದಿಲ್ಲ.

(ಸುಬ್ಬ—ಕೆಲಸದ ಹುಡುಗ—ಎರಡು ಲೋಟ ಕಾಫಿ ತೆಗೆದುಕೊಂಡು ಬಂದು ಮೇಜಿನ ಮೇಲಿಟ್ಟು ಹೋಗುತ್ತಾನೆ. ಗೋಪಿ ಎದ್ದು ಒಂದು ಲೋಟವನ್ನು ರಾಜುವಿನ ಮುಂದಿಡುತ್ತಾಳೆ.)

ರಾಜು: (ಲೋಟ ತನ್ನ ಮುಂದಿಟ್ಟುದನ್ನು ಲಕ್ಷಿಸದೆ) ಯಾವಾಗ ಬರ್ತಾನೆ?

ಗೋಪಿ: ಇನ್ನೂ ಸ್ವಲ್ಪ ಹೊತ್ತಾಗಬಹುದು. ಕಾಫಿ ತಗೊಳ್ಳಿ.

ರಾಜು: (ತಮಾಷೆಮಾಡುವ ಧಾಟಿಯಲ್ಲಿ) ನಮ್ಮ ಮೇಲೆ ಬಹಿಷ್ಕಾರ ಹಾಕಿಲ್ವೆ?

ಗೋಪಿ: ಹಾಕಿದವರನ್ನು ಕೇಳಿ! ಲೋಟ ಕೈಯಲ್ಲಿ ತೆಗೆದುಕೊಂಡು ರಾಜುವಿಗೆ ನೀಡುತ್ತ) ಮೊದಲು ಕಾಫಿ ಕುಡೀರಿ.

(ರಾಜು ಗೋಪಿಯ ಮುಖವನ್ನೆ ದುರುಗುಟ್ಟಿ ನೋಡುತ್ತಾನೆ. ಅವಳ ಹೃದಯದ ನೋವು ಮುಖದಲ್ಲಿ ಮೂಡುತ್ತಿದೆ. ಸ್ವಾಭಿಮಾನವನ್ನೂ ಗೌರವವನ್ನೂ ಕಾಪಾಡುವುದಕ್ಕೆ ಎನ್ನುವಂತೆ ಅವಳು ರಾಜುವಿನ ಮುಖದಿಂದ ದೃಷ್ಟಿ ಹಿಂತೆಗೆದು ತನ್ನ ಕೈಯಲ್ಲಿರುವ ಲೋಟವನ್ನಷ್ಟೆ

(ಶಾಸ್ತ್ರಿಯ ಕೈ ಹಿಡಿದುಕೊಂಡು ಹೊರಗೆ ಹೋಗುತ್ತಾನೆ)

ರಾಜು: (ನಾರಾಣಪ್ಪನೂ ಶಾಸ್ತ್ರಿಯೂ ಬಂದು ಹಿಂತಿರುಗಿ ಹೋದುದನ್ನು ಕಂಡು ನಗಾಡುತ್ತ) ನನ್ನ ಹೊರಗೆ ಅಟ್ಟಿ ಬಿಡ್ತಾರೋ ಅಂತಿದ್ದೆ!

ಗೋಪಿ: ಬೇರೆಯವರ ಸಂಕ್ಟ ನಿಮಗೆ ತಿಳಿಯೊದೇ ಇಲ್ವಲ್ಲ!

ರಾಜು: ಜನ ಯಾಕೆ ಸಂಕ್ಟ ಪಟ್ಕೋತಾರೋ—ನಂಗೊತ್ತಿಲ್ಲ. ನಂಗಂತೂ ಯಾವ ಸಂಕ್ಟನೂ ಇಲ್ಲ.

ಗೋಪಿ: ಚಿಕ್ಕವರಾಗಿದ್ದಾಗ ನಾವು ಒಟ್ಟಿಗೆ ಆಡುತ್ತಿದ್ದೆವು!

ರಾಜು: ಹೌದು. ಅದಕ್ಕೆ ಮಕ್ಕಳಾಟಾಂತಾರೆ!

ಗೋಪಿ: (ದೂರಕ್ಕೆ ಶೂನ್ಯ ದೃಷ್ಟಿಯಿಂದ ಎವೆಇಕ್ಕದೆ ನೋಡುತ್ತ, ರಾಜು ಹೇಳುವುದಕ್ಕೆ ಕಿವಿಗೊಡದೆ, ತನ್ನಷ್ಟಕ್ಕೆ ತಾನೆ ಮಾತಾಡುವಂತೆ) ನಾವು ಒಡನಾಡಿಗಳಾಗಿ ಬೆಳೆದೆವು!

ರಾಜು: ಅದೂ ನಿಜಾನೆ!

ಗೋಪಿ: (ಮೊದಲಿನಂತೆಯೆ) ನಮ್ಮಿಬ್ಬರನ್ನು ಜೊತೆ ಸೇರಿಸಿ ಮನೆಯವರು ಏನೇನೋ ಹೇಳ್ತಿದ್ರು!

ರಾಜು: ಸರಿ:

ಗೋಪಿ: ನಾನೂ ಏನೇನೋ ಆಶೆ ಕಟ್ಕೊಂಡಿದ್ದೆ!

ರಾಜು: ಇರಬಹುದು! ನಂಗೊತ್ತಿಲ್ಲವ್ವ!

ಗೋಪಿ: (ಕಣ್ಣುಗಳಲ್ಲಿ ನೀರು ತುಂಬುತ್ತದೆ) ನೀವು ಪೋಲಿಗಳ ಜೊತೆ ಸೇರಿ ಕೆಟ್ಹೋದು, ಹೊಡ್ಕೋದೆಲ್ಲ ಶುರುಮಾಡಿದಾಗ ನನ್ನ ಹೆತ್ತವರು ರೋಸಿ ಹೋದ್ರು!

ರಾಜು: ನ್ಯಾಯವೆ!

ಗೋಪಿ: (ಬಿಕ್ಕುತ್ತ) ನಾನು ಏನ್ಹೇಳಲಿ ನಿಮ್ಗೆ ಹೇಳಿ ಕಳ್ದೆ!

ರಾಜು: ನಾನು ಪೋಲಿಯಲ್ವೆ? ನಿಮ್ಮ ಜನಗಳು ನನ್ನ ಹತ್ರ ಬರೋದಿಕ್ಕೇ ಹೆದರ್ಕೊಂಡಿರ್ಬೇಕು—ಪಾಪ!

ಗೋಪಿ: ನನ್ನನ್ನು ಒಬ್ಬ ಕಂಡು ಸಮಾಧಾನ ಪಡ್ಸೋದಕ್ಕೂ ನೀವು ಕೋರ್ಲಿಲ್ಲ!

ರಾಜು: ನನ್ನ ಬಿಸ್‌ನೆಸ್ಸೇ ಜೋರಾಗಿತ್ತು—ಪುರ್‌ಸತ್ತಿರ್ಲಿಲ್ಲ!

ಗೋಪಿ: ನಾನೀಗ ಗೂಡಿನೊಳಗಿನ ಗಿಳಿಯಾಗಿದ್ದೇನೆ. (ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಾಳೆ)

ರಾಜು: ಅಳೋದ್ಯಾಕೆ? ಮಹಾಭಾಗ್ಯಶಾಲಿ, ಮಹಾಯೋಗ್ಯ ಕೈಹಿಡಿದಿದ್ದಾನೆ!

(ಗೋಪಿ ಉತ್ತರ ಕೊಡುವುದಿಲ್ಲ. ಅಳುತ್ತಿದ್ದಾಳೆ)

ರಾಜು: (ವ್ಯಂಗ್ಯವಾಗಿ) ನಿಮ್ಮ ಗಂಡ ಕುಡ್ಯೋದಿಲ್ಲ, ಹೊಡ್ಯೋದಿಲ್ಲ! ಊರಿಗೇ ದೊಡ್ಡ ಮುಖಂಡ! ಪರೋಪಕಾರಿ!

ಗೋಪಿ: ನನ್ನ ಮುಂದೆ ಅವರನ್ನ ದೂರ್ಬೇಡಿ!

ರಾಜು: (ಪರಿಹಾಸ್ಯ ಧಾಟಿಯಲ್ಲಿ) ದೂರಿದ್ರೆ?

ಗೋಪಿ: ಕಿವಿ ಮುಚ್ಕೊಳ್‌ಬೇಕಾಗ್ತದೇ ಮತ್ತೇನ್ಮಾಡ್ಲಿ?

ರಾಜು: ಓಹೋ! ನಡಿಅಚೇಂತ ಅನ್ನೀರಂತಿದ್ದೆ.

ಗೋಪಿ: ನಿಮ್ಮ ಅಣ್ಣನ್ನ ನೀವು ಬೈದ್ರೆ ನಾನ್ಯಾಕೆ ಇದಿರಾಡ್ಬೇಕು! ನಾನು ಕೇಳೋಕಾಗಲ್ಲಾಂತ ಮಾತ್ರ ಹೇಳ್ದೆ.

ರಾಜು: ಈವತ್ತು ನಿಮ್ಮ ಯಜಮಾನ್ರ ಹತ್ರ ಲೆಕ್ಕಾಚಾರ ತೀರ್ಮಾನಕ್ಕೆ ಬಂದಿದೀನಿ.

ಗೋಪಿ: ನಿಮ್ಮ ಲೆಕ್ಕಾಚಾರ ತೀರ್ಮಾನ ನನ್ನ ಮುಂದೆ ಅಗ್ಬೇಕಾಗಿಲ್ಲ.

ರಾಜು; ಯಜಮಾನ್ರ ಮುಂದೇನೇ ಮಾಡೋದಿಕ್ಕೆ ಬಂದಿದೀನಿ! ಹತ್ತು ವರ್ಷ ಕುಟುಂಬದ ಆಡಳಿತೆ ನೋಡಿ ಆಸ್ತಿಯನ್ನೆಲ್ಲ ಸ್ವಂತಕ್ಕೆ ಮಾಡ್ಕೊಂಡು ಬಿಟ್ಟಿದಾನೆ. ಅದ್ರ ಲೆಕ್ಕ ತೀರ್ಸಿ ಕೊಟ್ರೆ—ಬದ್‌ಕ್ತಾನೆ! ಇಲ್ಲಾಂದ್ರೆ ಅವನ ಕಲ್ಪಂಕ—ಕಲ್ದಾರಿ—ಕಂಟ್ರಾಕ್ಟು ಏನೂ ಉಳಿಯಂಗಿಲ್ಲ. ಅವನ ಡೊಳ್ಳು ಹೊಟ್ಟೆ ಸಿಗಿದ್‌ಬಿಟ್ಟೇನು!

ಗೋಪಿ: (ಕೋಪ ಮತ್ತು ಸಂಕಟ ತುಂಬಿದ ಸ್ವರದಲ್ಲಿ) ಅದೆಲ್ಲ ನನ್ನ ಮುಂದೆ ಹೇಳ್ಬೇಡೀಂತ ಮೊದ್ಲೆ ಹೇಳಿದೀನಿ. ಮನುಷ್ಯಾಂತ ಅಂದ್ಮೇಲೆ ಸ್ವಲ್ಪ ಬುದ್ಧಿ ಇರ್ಬೇಕು:

ರಾಜು: (ತಮಾಷೆಯ ಮಟ್ಟಿನಲ್ಲಿ) ಹಾಂ! ಆಸ್ತಿ ವಿಚಾರ ಎತ್ತಿದ್ರೆ ಅತ್ತಿಗಮ್ಮನಿಗೂ ಕೋಪಾನೆ?

ಗೋಪಿ: ನಿಮ್ಮ ಆಸ್ತಿ ಪಾಸ್ತಿ ಯಾರಿಗೆ ಬೇಕು? ಇರೋದೆಲ್ಲ ತಗೊಂಡು ಹೋದ್ರೂ ನಾನು ಬೇಡಾನ್ನೋದಿಲ್ಲ.

ರಾಜು: ಮತ್ಯಾಕಮ್ಮಾ ಮುರ್ಗೋದು?

ಗೋಪಿ: ಎಲ್ಲ ಐಶ್ವರ್ಯಕ್ಕಿಂತಲೂ ಮನುಷ್ಯತ್ವಕ್ಕೆ ಹೆಚ್ಚು ಬೆಲೆ ಕೊಡುವಾಕೆ—ನಾನು. ನಿಮ್ಮ ಅಣ್ಣನನ್ನೇ ಕಂಡು ಮಾತಾಡಿ—ಅತ್ತೆಯವರನ್ನು ಮುಂದಿಟ್ಟು ಎಲ್ಲ ತೀರ್ಮಾನಿಸಿ. ಗಲಾಟೆ ಯಾಕೆ?

ರಾಜು: (ಏಳುತ್ತಾನೆ) ನಂಗೆ ಬುದ್ಧಿ ಹೇಳ್ಬೇಕಾಗಿಲ್ಲ—ನಿಮ್ಮ ಗಂಡನಿಗೆ ಹೇಳಿ, ಬೇಕಾದ್ರೆ! ತೀರ್ಮಾನ ಆಗ್ತದೋ ಇಲ್ವೋ ನಾನು ನೋಡ್ಕೋತೀನಿ (ಹೋಗಲು ಹೊರಡುತ್ತಾನೆ.)

ಗೋಪಿ: (ರಾಜುಗೆ ಸ್ವಲ್ಪ ಹತ್ತಿರ ಬಂದು, ಅವನ ಮುಖವನ್ನೇ ನೋಡುತ್ತ) ಈಗ ನಾನು ಹಿಂದಿನ ಗೋಪಿ ಅಲ್ಲ!

ರಾಜು: ಮತ್ತೆ?

ಗೋಪಿ: ನಾನು ನಿಮ್ಮ ಅತ್ತಿಗೆ! ನೀವು ನನ್ನ ಮೈದುನ!

ರಾಜು: ಯಾರು ಅಲ್ಲಾಂತಾರೆ?

(೯ನೇ ಪುಟ ನೋಡಿ)

ಮೈಸೂರು ವಿಧಾನ ಪರಿಷತ್ತು ಚುನಾವಣೆ

ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳ ಸ್ಥಾನಿಕ ಸಂಸ್ಥೆಗಳ ಪರವಾಗಿ, ಮೈಸೂರು ವಿಧಾನ ಪರಿಷತ್ತಿಗೆ 3 ಸದಸ್ಯರನ್ನು ಆರಿಸಬೇಕಾಗಿದ್ದು, ಇವರ ಚುನಾವಣೆಯು 30—1—58ಕ್ಕೆ ಜರಗಿತು. ವಿರೋಧ ಪಕ್ಷದವರಿಗೆ ವಿಚಾರ ಮಾಡಲು ಅವಕಾಶ ಸಿಗದಂತೆ ಅತ್ಯಂತ ಗಡಿಬಿಡಿಯಲ್ಲಿ ಈ ಚುನಾವಣೆಯನ್ನು ನಡೆಸಲಾಯಿತು. ತಂತಿ ಮೂಲಕ ಮುನಿಸಿಪಾಲಿಟಿ, ಗ್ರಾಮ ಪಂಚಾಯಿತಿ ಸದಸ್ಯರ ಹೆಸರುಗಳನ್ನು ತರಿಸಿಕೊಂಡು ಮತದಾರರ ಯಾದಿಯನ್ನು ತಯಾರಿಸಲಾಗಿತ್ತು. ಇದಕ್ಕೆ ಯೋಗ್ಯ ಪ್ರಸಿದ್ಧಿ ಕೊಡಲಿಲ್ಲ. ಅರ್ಜಿ ಕೊಡುವ ಕೊನೆಯ ತಾರೀಕನ್ನು ಯೋಗ್ಯ ರೀತಿಯಲ್ಲಿ ಪ್ರಕಟ ಮಾಡಿರಲಿಲ್ಲ. ವಿರೋಧಿ ಪಕ್ಷದವರಿಗೆ ಯಾವುದೇ ರೀತಿಯಲ್ಲಿ ಅವಕಾಶ ಸಿಗಬಾರದೆಂಬ ದುರುದ್ದೇಶದಿಂದಲೇ ಇಷ್ಟು ಅವಸರ ಮಾಡಿ ಸರಕಾರದವರು ಈ ಚುನಾವಣೆ ನಡೆಸಿದಂತೆ ಕಂಡುಬರುತ್ತದೆ.

ಕಾಂಗ್ರೆಸ್ಸಿನವರ ಅಪಪ್ರಚಾರ

ಗ್ರಾಮ ಪಂಚಾಯತಿಗಳಲ್ಲಿ ತಮಗೆ ಬೆಂಬಲ ಸಿಗುವುದಿಲ್ಲವೆಂದು ಕಂಡುಬಂದ ಕೂಡಲೇ ಕಾಂಗ್ರೆಸ್ಸಿನವರು ಬೆದರಿಕೆ ಹಾಕುವ ಅಸ್ತ್ರವನ್ನು ಬಳಸಿದರು. ಹಳ್ಳಿಗಳಲ್ಲಿ ಗ್ರಾಮ ಪಂಚಾಯತಿ ಸದಸ್ಯರ ಸಭೆ ಕರೆದು, ಮತದಾನವಾದ ಪೆಟ್ಟಿಗೆಗಳನ್ನು ಆಯಾ ಗ್ರಾಮ ಪಂಚಾಯತಿ ಕಚೇರಿಗಳಲ್ಲಿಯೇ ತೆರೆಯಲಾಗುವುದೆಂದೂ, ಕಾಂಗ್ರೆಸ್ಸಿಗೆ ಯಾರು ವಿರುದ್ಧ ಮತ ಕೊಡುತ್ತಾರೆಂಬುದು ತಿಳಿಯುವುದೆಂದೂ, ಅಂಥವರ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದೂ ಮುಂತಾಗಿ ಬೆದರಿಕೆ ಹಾಕಲಾಯಿತು. ಜಾತೀಯ ಭಾವನೆಯ ದುರುಪಯೋಗ ಮಾಡಿಕೊಳ್ಳಲಾಯಿತು "ಎಸ್. ಕೆ. ಉಪಾಧ್ಯಾಯರು ಕಮ್ಯೂನಿಸ್ಟರಿದ್ದು, ಅವರು ಆರಿಸಿ ಬಂದರೆ ಹೊಲ-ಮನೆಗಳನ್ನೆಲ್ಲ ಕಸಿದುಕೊಳ್ಳುವರೆಂದೂ" ಅಪಪ್ರಚಾರ ಮಾಡಿದರು.

ಲೋಕ ಸೇವಾ ಸಂಘದ ದ್ರೋಹ

ಕಾಂಗ್ರೆಸ್ಸಿನವರ ಈ ಅಪಪ್ರಚಾರವನ್ನು ಯೋಗ್ಯ ರೀತಿಯಲ್ಲಿ ಎದುರಿಸಲಾಯಿತು. ಪೆಟ್ಟಿಗೆಗಳನ್ನು ಹಳ್ಳಿಗಳಲ್ಲಿ ಒಡೆಯದೆ, ಧಾರವಾರ ಕಲೆಕ್ಟರರ ಕಚೇರಿಯಲ್ಲಿ ತೆರೆಯಲಾಗುವುದೆಂದು ಹೇಳಿ ಕಾಂಗ್ರೆಸ್ಸಿನವರ ಬಾಯಿ ಮುಚ್ಚಲಾಯಿತು. ನಾಲ್ಕು ಜಿಲ್ಲೆಗಳಲ್ಲಿಯೂ ಶ್ರೀ ಉಪಾಧ್ಯಾಯರ ಸಲುವಾಗಿ ಅತಿ ಉತ್ಸಾಹದ ಬೆಂಬಲ ಕಂಡುಬಂದರೂ ಕೂಡ ಲೋಕ ಸೇವಕ ಸಂಘದವರ ದ್ರೋಹದಿಂದ ಮೂವರು ವಿರೋಧಿ ಉಮೇದ್ವಾರರ ಸೋಲಿಗೆ ಕಾರಣವಾಯಿತು. ಲೋಕ ಸೇವಕ ಸಂಘದ ಅಧ್ಯಕ್ಷ ಶಿವಮೂರ್ತಿ ಸ್ವಾಮಿ, ಮತ್ತು ಈ ಸಂಘದ ಮುಖಂಡರಾದ ಶ್ರೀ ಎಂ ಎಸ್. ಸುಗಂಧಿ ಎಂ. ಪಿ., ಮಹಾದೇವಪ್ಪ ಪಟ್ಟಣ, ಎಂ.ಎಲ್.ಎ ; ಬಿ.ಎಸ್. ಪಾಟೀಲ, ವಕೀಲ, ಮೊದಲಾದವರು, ತನ್ನ ಸಂಘದ ಉಮೇದ್ವಾರರಿಲ್ಲೆಂದು ಶ್ರೀ ಉಪಾಧ್ಯಾಯರ ಸಲುವಾಗಿ ಪ್ರಚಾರ ಮಾಡಿದ್ದರು. ಡಾ। ನಾಗೂರ ಮೊದಲಾದವರು ಬಂದು ಶ್ರೀ ಸರನಾಡ ಗೌಡರ ಸಲುವಾಗಿ ಪ್ರಚಾರ ಮಾಡಬೇಕೆಂದು ಹೇಳಿದರೂ ಕೂಡ ಇವರು ಒಪ್ಪಲಿಲ್ಲ. ಜನವರಿ ಮೂರನೇ ವಾರದಲ್ಲಿ ಕೆಲವು ಜಾತೀಯವಾದಿಗಳ ಮತ್ತು ಭೂ ಒಡೆಯರ ಸಂಘದವರ ಒತ್ತಾಯಕ್ಕೆ ಬಲಿಯಾಗಿ, ಶ್ರೀ ಸರನಾಡ ಗೌಡರನ್ನು ಲೋಕ ಸೇವಕ ಸಂಘದ ಸದಸ್ಯರನ್ನಾಗಿ ಮಾಡಿ, ಸಂಘದ ಪರವಾಗಿ ಅಧಿಕೃತ ಪ್ರಕಟನೆ ತೆಗೆಯಲಾಯಿತು. ಈ ಪ್ರಕಟನೆ ಮತ್ತು ಶ್ರೀ ಸುಗಂಧಿ ಮತ್ತು ಪಟ್ಟಣ ಇವರು ಶ್ರೀ ಸರನಾಡ ಗೌಡರ ಸಲುವಾಗಿ ತಡವಾಗಿ ಶುರುಮಾಡಿದ ಪ್ರಚಾರದಿಂದಾಗಿ ಮತದಾರರಲ್ಲಿ ಗೊಂದಲ ಉಂಟಾಯಿತು. ಇವರೆಲ್ಲ ಒಣ್ಣ ಬದಲಾಯಿಸಿದ್ದಕ್ಕಾಗಿ ಎಷ್ಟೋ ಜನರು ಇವರನ್ನು ಟೀಕಿಸಿದರು. ಲೋಕ ಸೇವಕ ಸಂಘದವರ ಈ ದ್ರೋಹಕ್ಕೆ ಬೇಸತ್ತ ಎಷ್ಟೋ ಜನರು, ಕಾಂಗ್ರೆಸ್ಸಿಗೆ ಮತಹಾಕಿದ ಉದಾಹರಣೆಗಳಿವೆ. ಶ್ರೀ ಮಹಾದೇವಪ್ಪ ಪಟ್ಟಣರವರ ವಚನ ವಿಚಾರದಂತಿದ್ದ ರಾಮದುರ್ಗದಲ್ಲಿ, ಪಟ್ಟಣರವರು ತಮ್ಮ ಧೋರಣೆ ಬದಲಿಸಿದ್ದನ್ನು ನೋಡಿ, ಅಲ್ಲಿಯ ಮತದಾರರು ಕಾಂಗ್ರೆಸ್ಸಿಗೆ ಮತ ಹಾಕಿದರು. ಹೀಗೆ ಎಷ್ಟೋ ಕಡೆಗಳಲ್ಲಿ ಘಟಿಸಿದೆ. ಸವದತ್ತಿಯ ಶ್ರೀ ಶಂಕರ ಕಪ್ಪಣ್ಣವರ ಮತ್ತು ಶ್ರೀ ಪದಕಿ ವಕೀಲರು, ಹಾವೇರಿಯ ಹೊಸಮನೆ ಸಿದ್ದಪ್ಪನವರೂ ಅವರಂತೆಯೇ ಕಾರವಾರದವರು ಎಷ್ಟು ಒತ್ತಾಯ ಬಂದರೂ ತಾವಿತ್ತ ವಚನಕ್ಕೆ ಅಂಟಿಕೊಂಡರು.

ಲೋಕ ಸೇವಾ ಸಂಘದವರೂ, ಭೂ ಒಡೆಯರ ಸಂಘದವರೂ ಜೊತೆಯಾಗಿಯೇ ಪ್ರಕಟನೆ ತೆಗೆದು, ದೊಡ್ಡ ಭೂಮಾಲಕರಾದ ಶ್ರೀ ಸರನಾಡ ಗೌಡರಿಗೆ ಬೆಂಬಲ ಕೊಟ್ಟಿರುವುದನ್ನು ನೋಡುವಾಗ, ಲೋಕ ಸೇವಕ ಸಂಘ, ಕರ್ನಾಟಕದ ರೈತರ ಕೈಬಿಟ್ಟು, ಭೂ ಒಡೆಯರ ಬೆನ್ನು ಹತ್ತಿದೆಯೋ ಎಂದು ಸಂಶಯ ಬರುತ್ತದೆ. ಲೋಕ ಸೇವಕ ಸಂಘದವರು ತಮ್ಮ ಅಲ್ಪ ಬುದ್ಧಿಯಿಂದ, ವಿರೋಧಿಗಳನ್ನು ಸೋಲಿಸಿ, ಕಾಂಗ್ರೆಸ್ಸಿನವರು ಆರಿಸಿ ಬರುವಂತೆ ಮಾಡಿದರೆಂದರೆ ತಪ್ಪಾಗಲಾರದು.

— ಡಿ. ಎಂ. ಖಲಾಸಿ
ಬಿಜಾಪುರ

ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲ್ ಚುನಾವಣೆಯಲ್ಲಿ ವಿರೋಧ ಪಕ್ಷದ ವಿಜಯ

ಪಶ್ಚಿಮ ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲ್ ಚುನಾವಣೆಯಲ್ಲಿ, ಕಲ್ಕತ್ತಾ ಪದವೀಧರರ ಕ್ಷೇತ್ರದಿಂದ ಕಮ್ಯೂನಿಸ್ಟ ಸ್ಪರ್ಧಿಯಾದ ಶ್ರೀ ಗೋಪಾಲ್ ಚಂದ್ರ ಹಾಲ್ದಾರ್ ಮತ್ತು ಪಿ. ಎಸ್. ಪಿ. ಉಮೇದವಾರ ಪ್ರೊಫೆಸರ್ ತ್ರಿಪುರಾರಿ ಚಕ್ರವರ್ತಿಯವರು ಚುನಾಯಿತರಾಗಿದ್ದಾರೆ.

ಎದುರು ಸ್ಪರ್ಧಿಗಳಾಗಿ ಸೋತವರು ಕಾಂಗ್ರೆಸ್ ಉಮೇದುವಾರರಾಗಿದ್ದಾರೆ.

ಪ್ರಾಂತೀಯ ಸುದ್ದಿ ಸಂಗ್ರಹ

ತೂದೂರಿನಲ್ಲಿ ಕಮ್ಯೂನಿಸ್ಟ ಪಾರ್ಟಿಯ ಬಹಿರಂಗ ಸಭೆ

ಕಾಂಗ್ರೆಸ್ಸಿಗರ ಹತ್ತು ವರ್ಷದ ಆಳ್ವಿಕೆಯಲ್ಲಿ ಸಮಗ್ರ ಭೂಸುಧಾರಣೆ ತರಲಿಕ್ಕಾಗಲಿಲ್ಲ! —ಬಿ. ಎಸ್. ಎ. ಹೆಗ್ಡೆ

ತಾ. 16 2—58ನೇ ಭಾನುವಾರ ಮಧ್ಯಾಹ್ನ 4-30 ಗಂಟೆಗೆ ತೀರ್ಥಹಳ್ಳಿ ತಾಲ್ಲೂಕ ತೂದೂರು ಶಾಖೆಯ ಕಮ್ಯೂನಿಸ್ಟ ಪಾರ್ಟಿಯ ಆಶ್ರಯದಲ್ಲಿ ಬಹಿರಂಗ ಸಭೆಯು ತೂದೂರು ಶಾಲಾ ಮೈದಾನದಲ್ಲಿ ಸೇರಿತು.

ಶಾಖೆಯ ಕಾರ್ಯದರ್ಶಿ ಶ್ರೀ ಟಿ. ಡಿ. ಆರ್. ರಾಮಯ್ಯನವರು, ಸರ್ವರನ್ನೂ ಸ್ವಾಗತಿಸಿ ಪಾರ್ಟಿಗೆ ಬೆಂಬಲ ಕೋರಿದರು. ಭದ್ರಾವತಿಯ ಪಾರ್ಟಿಯ ಮುಂದಾಳುಗಳಾದ ಶ್ರೀ ಕೆ. ಶೇಷಗಿರಿ ಶಾಸ್ತ್ರಿಗಳು ಸಭಾಧ್ಯಕ್ಷತೆ ವಹಿಸಿದ್ದರು

ಶಿವಮೊಗ್ಗ ಜಿಲ್ಲಾ ಕಮ್ಯೂನಿಸ್ಟ ಮುಖಂಡರೂ, ತರುಣ ನ್ಯಾಯವಾದಿಗಳೂ ಆದ ಶ್ರೀ ಬಿ. ಎಸ್. ಎ ಹೆಗ್ಡೆಯವರು ಭಾಷಣ ಮಾಡುತ್ತಾ, ಭಾರತದ ರಾಜಕೀಯ ಪಕ್ಷಗಳ ಧೋರಣೆಗಳನ್ನೂ ವಿವರಿಸಿದರು. ಕಾಂಗ್ರೆಸ್ಸಿಗರು ಮಾಡುತ್ತಿರುವ ದಂದು ವೆಚ್ಚ ಮುಂತಾದುವುಗಳನ್ನು ಖಂಡಿಸಿ, ನಮ್ಮ ದೇಶದ ರಾಜಮಹಾರಾಜರುಗಳಿಗೆ ಕೊಡುತ್ತಿರುವ ವರ್ಷಾಸನದಲ್ಲಿ ಅರ್ಧ ಭಾಗ ಕಡಿತ ಮಾಡಿದರೆ ದ್ವಿತೀಯ ಪಂಚ ವಾರ್ಷಿಕ ಯೋಜನೆಗೆ ಹಣದ ಅನುಕೂಲವಾಗುತ್ತದೆ. ಈ ರೀತಿಯ ಅನೇಕ ದುಂದು ವೆಚ್ಚ, ಆಡಂಬರ ಮುಂತಾದುವುಗಳನ್ನು ನಿಲ್ಲಿಸಿದ್ದೇ ಆದರೆ ನಾವು ಯೋಜನೆಗೆ ಹಣವನ್ನು ಬೇರೆಯವರ ಹತ್ತಿರ ಬೇಡುವ ಪ್ರಸಂಗವೇ ಇರುವುದಿಲ್ಲ ಎಂದರು.

ಹೆಗ್ಡೆಯವರು ಮುಂದುವರಿದು ಕಾಂಗ್ರೆಸ್ಸಿಗರಿಗೆ, ತಮ್ಮ 10 ವರ್ಷದ ಆಳ್ವಿಕೆಯಲ್ಲಿ ಪ್ರಗತಿಗಾಮಿಯಾದಂತ ಸಮಗ್ರ ಭೂಸುಧಾರಣೆಯನ್ನು ತರಲಿಕ್ಕೆ ಸಾಧ್ಯವಾಗಲಿಲ್ಲ. ಮೊನ್ನೆ ತಾನೇ ಮಾಡಿದ ಜತ್ತಿ ಸಮಿತಿಯು ಎಲ್ಲರಿಗೂ ಜಟಿಲ ಸಮಸ್ಯೆ ಆಗಿದೆ. ಸಮಿತಿ, ವಿಸ್ತೀರ್ಣವನ್ನು ಸೂಚಿಸದೆ, ಆದಾಯವನ್ನು ಸೂಚಿಸಿದೆ. ಸಮಿತಿಯ ವರದಿಯನ್ನು ನಾವು ವಿರೋಧಿಸುವುದು, ಇನ್ನಷ್ಟು ಪ್ರಗತಿಶೀಲವಾಗಬೇಕೆನ್ನುವ ದೃಷ್ಟಿಯಿಂದ ಆದರೆ ಹೆಚ್ಚಾಗಿ ಕಾಂಗ್ರೆಸ್ಸಿಗರು ಪ್ರತಿಗಾಮಿಯಾಗಿ ವಿರೋಧಿಸುತ್ತಿದ್ದಾರೆ 5 ಜನಕ್ಕೆ ಅನುಕೂಲವಾಗುವ ಕಾನೂನು ಬೇಕೆ? 95 ಜನಕ್ಕೆ ಅನುಕೂಲವಾಗುವ ಕಾನೂನು ಬೇಕೆ? ಎಂದು ಪ್ರಶ್ನಿಸಿ ಈ ದೃಷ್ಟಿಯಿಂದ ನೋಡಿದಲ್ಲಿ ಒಟ್ಟಿನಲ್ಲಿ ಕಾಂಗ್ರೆಸ್ಸಿಗರಿಂದ ದೇಶಕ್ಕೆ ಕ್ಷೇಮವಿಲ್ಲ ಎಂದರು; ಮುಂದುವರಿದು, ಕೇರಳ ಭೂಸುಧಾರಣಾ ಶಾಸನವನ್ನು ಪ್ರಶಂಸಿಸಿ, ಅಲ್ಲಿಯ ಸರಕಾರದ ಕೆಲಸಕಾರ್ಯಗಳನ್ನು ವಿವರಿಸುತ್ತಾ ಸರಕಾರ ಜನತೆಯ ಹಿತ ರಕ್ಷಿಸಲು, ಜಾರಿಗೆ ತಂದಿರುವ ಶಾಸನ ಹಾಗೂ ಕಾನೂನುಗಳನ್ನು ಹೇಳಿ, ಪಾರ್ಟಿಗೆ ಸರ್ವರ ಬೆಂಬಲ ಕೋರಿದರು.

ಶ್ರೀ ಚಂದು ಕುಟ್ಟಿಯವರು ಪಾರ್ಟಿಯ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ. ಶೇಷಗಿರಿ ಶಾಸ್ತ್ರಿಗಳು ಕಮ್ಯೂನಿಸಂನ ಮೂಲ ತತ್ವಗಳನ್ನು ವಿವರಿಸಿದರು. ಶ್ರೀ ಟಿ. ಡಿ. ಆರ್. ರಾಮಯ್ಯನವರು ಸರ್ವರನ್ನು ವಂದಿಸಿದರು. ಈ ಸಭೆಗೆ, ಶಿವಮೊಗ್ಗಾದಿಂದ ಹಲವಾರು ಕಮ್ಯೂನಿಸ್ಟ ಕಾರ್ಯಕರ್ತರುಗಳೂ, ಸ್ಥಳೀಯ ಕಾಂಗ್ರೆಸ್ ಮುಂದಾಳುಗಳು ಸಹ ಆಗಮಿಸಿದ್ದರು.

ಸೋಮವಾರ ಪೇಟೆಯಲ್ಲಿ ಪೋಲೀಸರ ದೌರ್ಜನ್ಯ

ತಾ. 4—2—58ರಲ್ಲಿ ಮಸಗೋಡು ಗ್ರಾಮದ ತಿಮ್ಮಯ್ಯನವರ ಕಾಫಿ ತೋಟಕ್ಕೆ ಸೋಮವಾರಪೇಟೆ ಹೋಟೆಲ್ ಸಾಹುಕಾರರಾದ, ಹಾಗೂ ಮಸಗೋಡು ಗ್ರಾಮದ ಆಸ್ತಿದಾರರಾದ, ಕಣೂರವರ ಎಮ್ಮೆ-ದನಗಳು ನುಗ್ಗಿ ಅವುಗಳನ್ನು ದೊಡ್ಡಿಗೆ ಹಿಡಿಯಲು ಪ್ರಯತ್ನಿಸುತ್ತಿದ್ದಾಗ, ಕಣೂರವರ ಆಳಿಗೂ, ತಿಮ್ಮಯ್ಯನವರಿಗೂ ಜಗಳ ಪ್ರಾರಂಭವಾಯಿತು. ಇದನ್ನು ಕೇಳಿ ಕಣೂರವರು ಕೆಲವು ಪೋಲೀಸರನ್ನು ತಮ್ಮ ಕೆಲವು ಆಳುಗಳನ್ನು ರಾತ್ರಿ 9-30 ಗಂಟೆ ಸಮಯದಲ್ಲಿ ತಿಮ್ಮಯ್ಯನವರ ಮನೆಗೆ ಟ್ಯಾಕ್ಸಿ ಮಾಡಿ ಕರಕೊಂಡು ಹೋಗಿ, ತಿಮ್ಮಯ್ಯನವರು ಸ್ಟೇಶನ್ನಿಗೆ ಬರಬೇಕೆಂದು ಗದರಿಸಿದರು. ಬಾಗಿಲನ್ನು ಬೂಟ್ಸ ಕಾಲಿನಿಂದ ಒದೆದು, ಮನೆಯೊಳಗೆ ನುಗ್ಗಿ ತಿಮ್ಮಯ್ಯರನ್ನು ಹೊಡೆದು ಜಖಂ ಪಡಿಸಿ, ಪೋಲೀಸ್ ಸ್ಟೇಶನ್ನಿನಲ್ಲಿ ಪುನಃ ದೌರ್ಜನ್ಯ ವರ್ತನೆ ನಡೆಸಿದ್ದಾರೆ. ಆ ದಿನ ಅವರ ಕಿಸೆಯಲ್ಲಿದ್ದ ಸ್ವಲ್ಪ ರೂಪಾಯಿಯು ಸಹ ಕಾಣೆಯಾಗಿದೆ. ತಿಮ್ಮಯ್ಯನವರನ್ನು ಹೊಡೆದು ಜಖಂ ಪಡಿಸಿದ ಮೇಲೆ, ಮೆಡಿಕಲ್ ಸರ್ಟಿಫಿಕೇಟಾಗಿ ವೈದ್ಯಕೀಯ ಉಪಚಾರ ನಡೆಯುತ್ತಿದೆ.

ಈ ದಬ್ಬಾಳಿಕೆ ವಿಚಾರವನ್ನು ಡಿ. ಯಸ್. ಪಿ. ಸಾಹೇಬರವರಲ್ಲಿ ದೂರು ಮಾಡಿದ ಮೇರೆ ತಾ. 7-2-58ರಲ್ಲಿ, ಡಿ. ಯಸ್. ಪಿ. ಸಾಹೇಬರವರು ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್‌ರವರೂ ಬಂದು ವಿಚಾರಣೆಯಾಗಿದೆ. ಈ ಸಣ್ಣ ಪುಟ್ಟ ವಿಷಯದಿಂದ ಹಿಡಿದು ದೊಡ್ಡ ಪ್ರಸಂಗಗಳಲ್ಲೂ ಪೋಲೀಸರ ದಬ್ಬಾಳಿಕೆ ಮಿತಿ ಮೀರುತ್ತಿದೆ ಡಿ. ಎಸ್. ಪಿ. ಯವರು ಈ ಬಗ್ಗೆ ಯೋಗ್ಯ ವಿಚಾರಣೆ ನಡೆಸಿ, ತಪ್ಪಿತಸ್ಥ ಪೋಲೀಸರ ಮೇಲೆ ಕ್ರಮ ತೆಗೆದುಕೊಳ್ಳುವರೆಂದು ನಂಬಿರುತ್ತೇನೆ.

ಕಾರವಾರ ರೈತ ಸಮ್ಮೇಳನ

ಹಳಗಾ ಶ್ರೀ ನಾರಾಯಣ ದೇವಸ್ಥಾನದ ಪಟಾಂಗಣದಲ್ಲಿ ತಾರೀಕು 15-2-58 ನೇ ಮಧ್ಯಾಹ್ನ ೧-೩೦ಕ್ಕೆ ೭ ಎತ್ತಿನ ಬಂಡಿಗಳನ್ನು ಹೂಡಿ ಎರಡುವರೆ ಮೈಲುಗಳ ವರೆಗೆ ಅಧ್ಯಕ್ಷರ ಪ್ರಚಂಡ ಮೆರವಣಿಗೆಯಲ್ಲಿ ಕೆಂಪು ಬಾವುಟದೊಂದಿಗೆ ಜಯಘೋಷ ಮಾಡುತ್ತ ಸುತ್ತಲಿನ ಹಳ್ಳಿ ಹಳ್ಳಿಗಳಿಂದ ೫೦೦ ಜನರು ಒಳ್ಳೇ ಹುರುಪಿನಿಂದ ಕೂಡಿದ್ದರು. ಮಧ್ಯಾಹ್ನ ೪ ಘಂಟೆಯ ಸಮಯಕ್ಕೆ ಪರಿಷತ್ತಿನ ಕೆಲಸ ಪ್ರಾರಂಭವಾಯಿತು. ಮೊದಲು ಕೆಂಪು ಧ್ವಜಕ್ಕೆ ವಂದನೆಯನ್ನು ಮಾಡಿ ಶ್ರೀಮಾನ್ ದಯಾನಂದ ಸರ್ವೇಶ್ವರ ನಾಡಕರ್ಣಿಯವರು ಅಧ್ಯಕ್ಷತೆಯನ್ನು ವಹಿಸಿದರು. ತದನಂತರ ಜಿಲ್ಲಾ ಕಿಸಾನ ಸಭೆಯ ಕಾರ್ಯದರ್ಶಿಗಳಾದ ಕಾ। ಸಿ. ಎಫ್. ಪಡತಿಯವರು ಕಾರವಾರ ತಾಲೂಕಿನಲ್ಲಿ ಪ್ರತಿಯೊಂದು ಹಳ್ಳಿಯಲ್ಲಿ ಕಿಸಾನ ಸಭೆಯ ವತಿಯಿಂದ ಈ ವರೆಗೆ ೨೮ ಸಭೆಗಳಾಗಿವೆ ಎಂಧು ವಿವರಿಸಿ, ತಮ್ಮ ಈ ವರೆಗಿನ ಕಾರ್ಯದ ವರದಿಯನ್ನು ಒಪ್ಪಿಸಿದರು ಮತ್ತು ಕೆಳಗಿನ ಠರಾವುಗಳನ್ನು ಪರಿಷತ್ತಿನ ಮುಂದೆ ಮಂಡಿಸಿದರು. ಆ ನಂತರ ಶ್ರೀಮಾನ್ ಬಿ. ಪಿ. ಕದಮ ವಕೀಲ ಕಾರವಾರ ಇವರು, ರೈತರು ಈಗಿನ ಪರಿಸ್ಥಿತಿಯಲ್ಲಿ ಅನುಸರಿಸಬೇಕಾದ ಧೋರಣೆಯ ವಿಷಯ ಸವಿಸ್ತಾರವಾಗಿ ತಿಳಿಸಿ ಹೇಳಿದರು ಮತ್ತು ಮೈಸೂರ ಭೂಸುಧಾರಣೆಯ ಕಾಯ್ದೆಯಲ್ಲಿ ರೈತರ ಬೇಡಿಕೆಗಳನ್ನು ಮಾನ್ಯ ಮಾಡಲು ಜನತೆಯನ್ನು ಚಳುವಳಿ ಹೂಡುವರೆ ಕೇಳಿಕೊಂಡರು.

ಆ ನಂತರ ಗೋಪಿನಾಥ ಪವಾರ ಇವರು ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರದವರು ಮಾಡಿದ ಶಿಕ್ಷಣ ಹಾಗೂ ಕೋರ್ಟ ಕಚೇರಿ ವಗೈರೆ ವ್ಯವಹಾರಗಳಲ್ಲಿ ಜನತೆಗೆ ಒದಗಿಸಿದ ಸರಕಾರದ ಸವಲತ್ತುಗಳನ್ನು ತಿಳಿಸಿ ಹೇಳಿದರು. ಆ ನಂತರ ಕಾ। ರಾಮ ಕಲಗುಟಕರ ಮುನಿಸಿಪಲ್ ಕೌನ್ಸಿಲರ್ ಕಾರವಾರ ಇವರು ಕಾ। ಶಿವಾನಂದ ಮಾಂಜರೇಕರ, ಕಾ। ಹೈದರ ಸಾಹೇಬ ಕಾ। ಅಮಿರುದ್ದೀನ ಸಾಹೇಬ, ಕಾ। ಎಗ್.ಜಿ. ಮ್ಹಾಳಸೇಕರ ಇವರೆಲ್ಲರು ಸಮ್ಮೇಳನದ ಠರಾವುಗಳ ವಿಷಯವಾಗಿ ಮಾತನಾಡಿದರು. ಕಡೆಗೆ ಅಧ್ಯಕ್ಷರು ಸಮಾರೋಪ ಭಾಷಣದಲ್ಲಿ ನೆರೆದ ೫೦೦೦ ಜನಸಮುದಾಯವು ತೋರಿಸಿದ ಅವರ ಉತ್ಸಾಹವನ್ನು ನೋಡಿ ಅಭಿನಂದಿಸಿ, ಇದೇ ಪ್ರಕಾರ "ರೈತನೇ ಭೂಮಾಲಕ"ನಾಗುವ ಧ್ಯೇಯವು ಕೈಗೂಡುವ ವರೆಗೆ ಒಕ್ಕಟ್ಟಿನಿಂದ ಹೋರಾಡಬೇಕಾಗಿ ಕೇಳಿಕೊಂಡರು. ಈಗಿನ ಕಾಲಮಾನ ಪರಿಸ್ಥಿತಿಗನ್ನುಸರಿಸಿ ನಮ್ಮ ಜಿಲ್ಲೆಯ ಮಧ್ಯಮ ವರ್ಗದವರು ರೈತ-ಕೂಲಿಗಾರರನ್ನು ಕೂಡಿಕೊಂಡು ಶಾಂತ ಮತ್ತು ಸಹನ ಶೀಲ ರೀತಿಯಿಂದ ನಮ್ಮ ದೇಶದ ಏಳ್ಗೆಯನ್ನು ಸಾಧಿಸುವರೆ ಸಹಕರಿಸಬೇಕಾಗಿ ವಿನಂತಿಸಿದರು. ಮತ್ತು ಜಯಘೋಷದೊಂದಿಗೆ ರಾತ್ರೆ 9 ಘಂಟೆಗೆ ಪರಿಷತ್ತಿನ ಕಾರ್ಯಕ್ರಮ ಮುಕ್ತಾಯವಾಯಿತು. ಅನಂತರ ಪರಿಷತ್ತಿಗೆ ನೆರೆದ ಜನರ ಮನರಂಜನೆಗಾಗಿ ಅಸ್ನೋಟಿಯ ಶ್ರೀ ರಾಮನಾಥ ಪ್ರಸಾದಿಕ ನಾಟ್ಯ ಮಂಡಳಿಯವರು ಸಂಗೀತ "ದೇವತಾ" ಎಂಬ ಮರಾಠಿ ನಾಟಕವನ್ನು ಉತ್ತಮವಾಗಿ ಅಭಿಯಿಸಿ ಜನರ ಮಾನ್ಯತೆಯನ್ನು ಪಡೆದರು.

(ಠರಾವುಗಳು ಮುಂದಿನ ಸಂಚಿಕೆಯಲ್ಲಿ)

ದ. ಕ. ಜಿಲ್ಲಾ ರೈತ ಸಂಘದ ಕಾರ್ಯಕಾರೀ ಸಮಿತಿಯ ಸಭೆ


(೬ನೇ ಪುಟದಿಂದ)

ರೈತ ಸಂಘದ ತೀರ್ಮಾನ ಪ್ರಕಾರ ತಾ. 23—2—58ರಂದು ಕೇಳಿಕೆ ದಿನಾಚರಣೆಯನ್ನು ಮಂಗಳೂರು, ಉಡುಪಿ, ಬಂಟ್ವಾಳ ಕೇಂದ್ರಗಳಲ್ಲಿ ಸಭೆ ಮೆರವಣಿಗೆಗಳ ಮೂಲಕ ಜರಗಿಸಬೇಕೆಂದೂ, ಅದಕ್ಕೆ ಮುಂಚಿತವಾಗಿ ಗ್ರಾಮ ಸಭೆಗಳನ್ನು ವಿವಿಧ ಕಡೆಗಳಲ್ಲಿ ಜರಗಿಸಿ ಯೋಗ್ಯ ಒಕ್ಕಲು ಹಿತಕಾಯಿದೆಯನ್ನು ಶೀಘ್ರದಲ್ಲೇ ಜ್ಯಾರಿಗೊಳಿಸುವಂತೆ ಮೈಸೂರು ಸರಕಾರವನ್ನು ಒತ್ತಾಯಿಸುವ ನಿರ್ಣಯಗಳನ್ನು ಅಂಗೀಕರಿಸಿ ಕಳುಹಿಸಬೇಕೆಂದೂ, 1958ರ ಸದಸ್ಯರನ್ನು ಸೇರಿಸುವ ಕೆಲಸವನ್ನು ಕೂಡಲೇ ಪ್ರಾರಂಭಿಸಬೇಕೆಂದೂ, ನಿರ್ಣಯಗಳಾದವು. ಅಧ್ಯಕ್ಷರು, ಜಿಲ್ಲೆಯ ಹಿರಿಯ ಭೂಮಾಲಕರು ರಾಜಕೀಯ ಬೇಧಭಾವವಿಲ್ಲದೆ ಒಂದುಗೂಡಿ ಒಕ್ಕಲು ಹಿತಕಾಯಿದೆಯ ವಿರೋಧವಾಗಿ ಚಳುವಳಿ ನಡೆಸುತ್ತಿರುವುದನ್ನು ಸಮಿತಿಯ ಗಮನಕ್ಕೆ ತಂದು, ರೈತರ ಹಿತರಕ್ಷಣೆಯ ಸಲುವಾಗಿ ರೈತ ಸಂಘವನ್ನು ಬಲಗೊಳಿಸಲು ಯೋಗ್ಯ ಸಲಹೆಗಳನ್ನಿತ್ತ ಬಳಿಕ ಧನ್ಯವಾದಗಳೊಂದಿಗೆ ಸಭೆ ಮುಕ್ತಾಯವಾಯಿತು.

ಮಾಲೂರು

ರೈತ ಸಂಘದ ಸ್ಥಾಪನೆ

9-2-1958ನೇ ಭಾನುವಾರ ಸಂಜೆ 5 ಗಂಟೆಗೆ ತಾಲೂಕ ರೈತ ಸಂಘದ ಕಛೇರಿಯಲ್ಲಿ ತಾಲೂಕಿನ ರೈತಾಂಗದ ಪ್ರತಿನಿಧಿಗಳು ಸಮಾವೇಶಗೊಂಡಿದ್ದರು. ಕೋಲಾರ ಜಿಲ್ಲಾ ರೈತಸಂಘದ ಅಧ್ಯಕ್ಷರೂ, ಚಿಂತಾಮಣಿ ತಾಲೂಕಿನ ಶಾಸನ ಸಭಾ ಸದಸ್ಯರೂ ಆದ ಕಾ॥ ಟಿ ಕೆ. ಗಂಗಿರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ತಾಲೂಕಿನಲ್ಲಿ ಎನ ರೈತ ಜನಾಂಗಕ್ಕಿರುವ ನಾನಾವಿಧವಾದ ತೊಂದರೆಗಳನ್ನೂ, ಮತ್ತು ಬಡ ಹಾಗೂ ಮಧ್ಯಮ ತರಗತಿಯವರಿಗೆ ಈಗಿನ ರಾಜ್ಯಭಾರ ಧೋರಣೆಯಿಂದ ಉಂಟಾಗಿರುವ ತೊಂದರೆ ಕಿರುಕುಳಗಳನ್ನೂ, ಚರ್ಚಿಸಲಾಯಿತು. ಜನತೆ ಹಾಗೂ ರೈತರಿಗೆ ಇರುವ ತೊಂದರೆಗಳನ್ನೂ, ಕುಂದುಕೊರತೆಗಳನ್ನೂ ಪರಿಹರಿಸಿಕೊಳ್ಳಲು ಸಂಘಟನೆ ಆವಶ್ಯಕವೆಂದೂ, ಇದಕ್ಕಾಗಿ ಮಾಲೂರು ತಾಲೂಕಿನಲ್ಲಿ ರೈತ ಜನಾಂಗವನ್ನು ಸಂಘಟಿಸಿ, ತಾಲೂಕ್ ರೈತಸಂಘವನ್ನು ಸ್ಥಾಪಿಸಿ, ತಾಲೂಕಿನ ಎಲ್ಲ ಹಳ್ಳಿಗಳಿಂದಲೂ ರೈತರನ್ನು ಸದಸ್ಯರನ್ನಾಗಿ ಮಾಡಬೇಕೆಂದು ಅಲ್ಲದೆ ಈ ಸಂಘವು ರೈತರ ಪ್ರಗತಿಗಾಗಿ ಹೋರಾಟ ನಡೆಯಿಸಬೇಕೆಂದೂ ತೀರ್ಮಾನಿಸಲಾಯಿತು. ಈ ತಾಲೂಕು ರೈತ ಸಂಘವು ಅಖಿಲಭಾರತ ಕಿಸಾನ ಸಭೆಯ ಶಾಖೆಯಾದ ಕರ್ನಾಟಕ ಪ್ರಾಂತ ರೈತಸಂಘದ ಅಂಗವಾಗಿ ಕೋಲಾರ ಜಿಲ್ಲಾ ಯ ನಿಟಿಗೆ ಒಳಪಟ್ಟದ್ದಾಗಿಯೂ ಕೆಲಸ ಮಾಡಬೇಕೆಂದು ತೀರ್ಮಾನಿಸಲಾಯಿತು.



ಶ್ರೀ ಬಿ. ಯಸ್. ಚಂದ್ರಣ್ಣ, ನೊಸಗೆರೆ—ಅಧ್ಯಕ್ಷರು, ಟಿ. ನಾರಾಯಣ ಸ್ವಾಮಿ, ಮಾಲೂರ—ಕಾರ್ಯದರ್ಶಿ, ಕೆ ಚನ್ನಪ್ಪನಾಯ್ಡು, ಕುಡಿಯನೂರು ಉಪಕಾರ್ಯದರ್ಶಿ, ಎಸ್. ಆಂಜನೇಯರೆಡ್ಡಿ, ಸೊಣ್ಣಹಳ್ಳಿ - ಖಜಾಂಚಿ ಮತ್ತು ಇತರ 10 ಸದಸ್ಯರನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಅನಂತರ ಟೌನ್‌ಹಾಲ್ ಮುಂದಿನ ಮೈದಾನದಲ್ಲಿ ಬಹಿರಂಗ ಸಭೆಯು ಕಾಂ॥ ಟಿ. ಕೆ. ಗಂಗಿರೆಡ್ಡಿಯವರ ಅಧ್ಯಕ್ಷತೆಯಲ್ಲಿ ನೆರೆದಿತ್ತು ಶ್ರೀ ಟ ನಾರಾಯಣಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು. ಅನಂತರ ಶ್ರೀ ಸಿ ಟಿ. ವೆಂಕಟರಾಮೇಗೌಡರು, ಶ್ರೀ ಬಿ. ಯಸ್. ಚಂದ್ರಣ್ಣನವರು ಮತ್ತು ಕಾಂ. ಟಿ. ನಾರಾಯಣ ಸ್ವಾಮಿಯವರು ತಾಲೂಕ್ ರೈತಸಂಘದ ಅವಶ್ಯಕತೆ, ಸಂಘದ ಧ್ಯೇಯಧೋರಣೆಗಳನ್ನು ವಿವರಿಸಿ ಭಾಷಣ ಮಾಡಿದರು ಅಧ್ಯಕ್ಷರಾದ ಕಾ॥ ಟಿ. ಕೆ. ಗಂಗಿರೆಡ್ಡಿಯವರು ದೇಶದಲ್ಲಿ ಕಾಂಗ್ರೆಸ್ ರಾಜ್ಯಪಾಲನೆಯ ನ್ಯೂನತೆಗಳು ಮತ್ತು ಪ್ರತಿಗಾಮಿ ನೀತಿಗಳನ್ನು ಖಂಡಿಸಿ ಧೀರ್ಘವಾಗಿ ಮಾತನಾಡಿದರಲ್ಲದೆ, ಜನತೆಯ ಶಕ್ತಿಯನ್ನು ಬೆಳೆಸಿಕೊಳ್ಳಬೇಕಾದ ಅವಶ್ಯಕತೆಯನ್ನೂ ರೈತಸಂಘಗಳ ಪೂರ್ವೇತಿಹಾಸಗಳನ್ನು ಅವು ಸಾಧಿಸಿರುವ ಪ್ರಗತಿಯನ್ನು ಸಾಂಗವಾಗಿ ವಿವರಿಸಿ ಭಾಷಣ ಮಾಡಿದರು.

ಶ್ರೀ ನಾರಾಯಣಸ್ವಾಮಿಯವರು ವಂದನಾರ್ಪಣೆ ಮಾಡಿದ ನಂತರ ಸಭೆಯು ಮುಕ್ತಾಯಗೊಂಡಿತು.

ಮಂಚಿಯಲ್ಲಿ ಸಾರ್ವಜನಿಕ ಸಭೆ

ತಾ. 14—2—1958ರಂದು ಮಂಚಿ ಗ್ರಾಮದ ಕುಕ್ಕಾಜೆಯಲ್ಲಿ ವರ್ಕಾಡಿ ಅನಂತರಾಮ ತಾಳಿತ್ತಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರುಗಿತು. ಕಾಸರಗೋಡು ತಾಲೂಕು ರೈತ ಸಂಘದ ಅಧ್ಯಕ್ಷರಾದ ಡಾ। ಸುಬ್ಬರಾಯರು ಕೇರಳ ಸರಕಾರವು ರೈತರ ಹಿತರಕ್ಷಣೆಗಾಗಿ ಕೈಗೊಂಡ ವಿವಿಧ ಕ್ರಮಗಳ ಕುರಿತು ಭಾಷಣವಿತ್ತು, ದಕ್ಷಿಣ ಕನ್ನಡ ಜಿಲ್ಲೆಯ ರೈತರು ತಮ್ಮ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿ ಒಗ್ಗಟ್ಟಾಗಬೇಕೆಂದು ವಿನಂತಿಸಿದರು. ಬಳಿಕ ದ. ಕ. ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಎಂ. ಎಚ್. ಕೃಷ್ಣಪ್ಪ, ಸಹಾಯಕ ಕಾರ್ಯದರ್ಶಿ ಶ್ರೀ ಕೆ. ಮೂಸಬ್ಬ ಮತ್ತು ಅಧ್ಯಕ್ಷ ಶ್ರೀ ಎ. ಕೃಷ್ಣ ಶೆಟ್ಟರು ರೈತರ ವಿವಿಧ ಸಮಸ್ಯೆಗಳ ಕುರಿತು ಭಾಷಣವಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪ್ರತಿಯೊಬ್ಬ ರೈತನೂ ರೈತ ಸಂಘವನ್ನು ಸೇರುವಂತೆ ವಿನಂತಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಕೇಳಿಕೆಯ ಪ್ರಕಾರ ನ್ಯಾಯ ಗೇಣಿ ನಿರ್ಣಯಿಸಿ ಒಕ್ಕಲೆಬ್ಬಿಸುವುದನ್ನು ಸಂಪೂರ್ಣವಾಗಿ ಪ್ರತಿಬಂಧಿಸುವ ಯೋಗ್ಯ ಒಕ್ಕಲು ಕಾಯಿದೆಯನ್ನು ಕೂಡಲೇ ಜ್ಯಾರಿಗೊಳಿಸುವಂತೆ ಮೈಸೂರು ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಸಭೆಯಲ್ಲಿ ಮಂಜೂರು ಮಾಡಿದ ಬಳಿಕ ಶ್ರೀ ಇರಾ ರಾಮ ಪೂಜಾರಿಯವರು ಧನ್ಯವಾದವನ್ನರ್ಪಿಸಿದರು.

ಒಕ್ಕಲು ಕಾಯಿದೆಗಾಗಿ ರೈತರ ಸಭೆ

ಇದೇ ತಾ॥ 16-2-58ರಂದು ಬಾಳೆಪುಣಿ ಗ್ರಾಮದ ಪೂಪೋಡಿಕಲ್ಲಿನಲ್ಲಿ ಶ್ರೀ ಕೊರಗಪ್ಪ ರೈಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರುಗಿ ಕರ್ನಾಟಕ ಪ್ರಾಂತ ರೈತ ಸಂಘದ ಕೇಳಿಕೆಯ ಮೇರೆಗೆ ನ್ಯಾಯ ಗೇಣಿಯನ್ನು ನಿರ್ಣಯಿಸಿ ಒಕ್ಕಲೆಬ್ಬಿಸುವುದನ್ನು ಸಂಪೂರ್ಣ ಪ್ರತಿಬಂಧಿಸುವ ಒಕ್ಕಲು ಕಾಯಿದೆಯನ್ನು ಕೂಡಲೇ ಜಾರಿಗೊಳಿಸುವಂತೆ ಮೈಸೂರು ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು. ಮೋಸ, ವಂಚನೆಗಳಿಂದ ಓದು ಬರಹವಿಲ್ಲದ ಬಡ ರೈತರಿಂದ ಸುಳ್ಳು ದಾಖಲೆಗಳನ್ನು ತಯಾರಿಸಿ ಒಕ್ಕಲೆಬ್ಬಿಸುವುದೇ ಮೊದಲಾದ ಅಕ್ರಮಗಳಿಗೆ ಹೆಚ್ಚು ಹೆಚ್ಚಾಗಿ ಕೈಯಿಡುತ್ತಿರುವ ಭೂಮಾಲಿಕರ ಹಾಗೂ ಅವರಿಗೆ ಬೆಂಬಲ ನೀಡುತ್ತಿರುವ ಸರಕಾರದ ವರ್ತನೆಯನ್ನು ಖಂಡಿಸಿ, ರೈತಹಿತ ಕಾಯಿದೆಗಾಗಿಯೂ, ಒಕ್ಕಲೆಬ್ಬಿಸುವುದನ್ನು ಪ್ರತಿಭಟಿಸುವುದಕ್ಕಾಗಿಯೂ ರೈತ ಸಂಘಕ್ಕೆ ರೈತರೆಲ್ಲರೂ ಒಗ್ಗಟ್ಟಿನಿಂದ ಸೇರಿ ಚಳುವಳಿ ಬಲಪಡಿಸಬೇಕೆಂದು, ಶ್ರೀಗಳಾದ ಇರಾ ರಾಮಪೂಜಾರಿ, ಎ. ಕೃಷ್ಣಶೆಟ್ಟಿ, ಎಂ. ಹೆಚ್. ಕೃಷ್ಣಪ್ಪ ಮತ್ತು ತೋಬಾಲ್ ಹಮ್ಮಬ್ಬ ಬ್ಯಾರಿಯವರು ಸಭೆಯಲ್ಲಿ ಭಾಷಣವಿತ್ತರು. ಅಧ್ಯಕ್ಷ ಭಾಷಣಾನಂತರ ಶ್ರೀ ಬಿ. ವೆಂಕಟರಮಣ ಆಚಾರಿಯವರು ಧನ್ಯವಾದವನ್ನಿತ್ತರು.

....ಮನೆ ಮುರಿದ ಮಗ....

(೭ನೇ ಪುಟದಿಂದ)

ಗೋಪಿ : ಅತ್ತಿಗೆ—ಮೈದುನರಿಗಿಂತಲೂ ಹತ್ತಿರ—ಅಣ್ಣ ಮತ್ತು ತಂಗಿ!

ರಾಜು : (ಪರಿಹಾಸ್ಯ ಧಾಟಿಯಲ್ಲಿ) ತಂಗಿ ಮತ್ತು ಅಣ್ಣ!

ಗೋಪಿ : (ಸಂಕಟದಿಂದ ನಡುಗುವ ಸ್ವರದಲ್ಲಿ) ನನಗೊಬ್ಬ ಅಣ್ಣ ಇರ್‌ತಿದ್ರೆ ನಾನು ಪ್ರೀತಿಸುತ್ತಿದ್ದ ಹಾಗೆ (ಅವಳಿಗೆ ಮುಂದೆ ಮಾತಾಡುವುದಕ್ಕಾಗುವುದಿಲ್ಲ)

ರಾಜು : ಪ್ರೀತಿಸುತ್ತಿದ್ದ ಹಾಗೆ?

ಗೋಪಿ : (ಸ್ವಂತ ನಿಯಂತ್ರಿಸಿಕೊಂಡು) ನಿಮ್ಮನ್ನು ಪ್ರೀತಿಸ್ತೇನೆ!

ರಾಜು : ನನ್ನ ಅಡ್ಡಿ ಇಲ್ಲ!

ಗೋಪಿ : (ಮೇಜಿನ ಮೇಲಿದ್ದ ಎರಡನೆ ಲೋಟ ಕಾಫಿ ತೆಗೆದು ರಾಜುವಿನ ಮುಂದೆ ಹಿಡಿದು) ಹಾಗಾದರೆ ಈ ಕಾಫಿ ಕುಡ್ದು ಹೋಗಬೇಕು.

(ರಾಜು ನಿರ್ವಿಕಾರನಾಗಿ ಆ ಲೋಟವನ್ನೇ ನೋಡುತ್ತಾ ನಿಂತಿದ್ದಾನೆ)

ಗೋಪಿ : (ಕಣ್ಣೀರು ತುಳುಕುವ ಕಣ್ಣುಗಳಿಂದ ರಾಜುವನ್ನು ನೋಡುತ್ತಾ) ನಿಮ್ಮ ತಂಗಿ ಶಾರದೆ ಕೊಡೋದೂಂತ ಎಣ್ಸಿ ಕುಡೀರಿ!

(ರಾಜು ಸ್ವಲ್ಪ ಹೊತ್ತು ಹಾಗೆಯೇ ನಿಂತಿದ್ದು, ಮತ್ತೆ ಏನೂ ಹೇಳದೆ ಹೊರಗೆ ನಡೆಯುತ್ತಾನೆ. ಗೋಪಿ ಅವನು ಹೋದ ದಿಕ್ಕಿಗೇ ನೋಡಿ ನಿಲ್ಲುತ್ತಾಳೆ. ಮತ್ತೆ ಲೋಟ ಮೇಜಿನ ಮೇಲೆ ಇಟ್ಟು ಸೆರಗಿನಿಂದ ಕಣ್ಣು ಒರಸಿಕೊಳ್ಳುತ್ತಾಳೆ. ಕೈಗಳ ಮೇಲೆ ತಲೆಯಿಟ್ಟು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾಳೆ. ಒಂದು ನಿಮಿಷ ಕಳೆದು, ದೀರ್ಘವಾಗಿ ನಿಟ್ಟುಸಿರು ಬಿಟ್ಟು, ಎದ್ದು ಒಳಗೆ ಹೋಗುತ್ತಾಳೆ.)

(ಮುಂದುವರಿಯುವುದು)

ವಿಧಾನ ಸಭೆಯ ಮುಂದೆ ಕಾರ್ಮಿಕರ ಪ್ರದರ್ಶನ

(ಮೊದಲನೇ ಪುಟದಿಂದ)

ದ್ಯಮಗಳಿಗೆ ವೇಜ್ ಬೋರ್ಡ್‌ಗಳನ್ನು ರಚಿಸಲಾಗಿಲ್ಲ.

ಕಾರ್ಮಿಕ ಇಲಾಖೆಯಂತೂ ಬಹಳ ಜಡತ್ವದಿಂದ ಕೆಲಸ ಸಾಗಿಸುತ್ತದೆ. ಫೈಲುಗಳು ಒಂದು ಮೇಜಿನಿಂದ ಇನ್ನೊಂದು ಮೇಜಿಗೆ ಮುಂದುವರಿಯುವುದೇ ಇಲ್ಲ. ಎಷ್ಟೋ ಕೈಗಾರಿಕಾ ವಿವಾದಗಳು ಇತ್ಯರ್ಥವಾಗದೇ ಉಳಿದಿದೆ. ಕೈಗಾರಿಕಾ ಕಾನೂನಿನ ಸೆಕ್ಷನ್ 33–33ಎ ಅರ್ಜಿಗಳು ವರ್ಷ ಕಳೆದರೂ ಇನ್ನೂ ಲೇಬರ್ ಕೋರ್ಟಿಗೆ ವರ್ಗಾಯಿಸಿಲ್ಲ. ಇಡೀ ರಾಜ್ಯಕ್ಕೆ ಒಂದೇ ಒಂದು ಕೈಗಾರಿಕಾ ವಿವಾದ ಕೋರ್ಟು ಇದೆ, ಎರಡು ಲೇಬರ್ ಕೋರ್ಟುಗಳಿವೆ. ಕೈಗಾರಿಕಾ ವಿವಾದ ಕೋರ್ಟು ಒಂದೇ ಇರುವುದರಿಂದ ನೂರಾರು ಕೇಸುಗಳು ಮುಂದೆ ಹೋಗುತ್ತಿವೆ. ವರ್ಷಗಟ್ಟಲೆಯಾದರೂ ಇತ್ಯರ್ಥವಾಗುತ್ತಿಲ್ಲ. ಇನ್ನೊಂದು ಟ್ರಿಬ್ಯೂನಲ್ ರಚಿಸುವುದು ಅತ್ಯಗತ್ಯ. ಕೈಗಾರಿಕಾ ವಿವಾದಗಳನ್ನು ಆದಷ್ಟು ಜಾಗ್ರತೆಯಾಗಿ ಇತ್ಯರ್ಥ ಮಾಡಲು ಆಗತ್ಯವಾಗಿರುವ ಆಡಳಿತ ಯಂತ್ರವನ್ನು ಸಜ್ಜುಗೊಳಿಸುವುದು ಅತ್ಯಗತ್ಯ. ಇದರಿಂದ ಉತ್ಪಾದನೆಯು ಅಧಿಕಗೊಳ್ಳುವುದಕ್ಕೂ ಸಹಾಯಕವಾಗುವುದು. ಸರಕಾರವು ಈ ಬೇಡಿಕೆಯನ್ನು ಅಲ್ಲಗಳೆಯುತ್ತ ಬಂದಿದೆ. ಸರಕಾರದ ಕಾರ್ಮಿಕ ಇಲಾಖೆ ಎಷ್ಟರಮಟ್ಟಿಗೆ ಸಜ್ಜಿತವಾಗಿದೆಯೆಂದರೆ, ಬೆಂಗಳೂರಿನಲ್ಲಿರುವ ಲೇಬರ್ ಕೋರ್ಟಿನಲ್ಲಿ ವರ್ಷವಾಗುತ್ತಾ ಬಂದರೂ ಒಂದು ಟೈಪ್‌ರೈಟರ್ ಇಲ್ಲ! ಕೋರ್ಟುಗಳಲ್ಲಿನ ಪರಿಸ್ಥಿತಿ ಹೀಗಾದರೆ, ಅವಾರ್ಡುಗಳು ಹೊರಬೀಳುತ್ತಿದ್ದಂತೆಯೇ ಅವು ಹೈಕೋರ್ಟನ್ನು ಮುಟ್ಟುತ್ತಿವೆ. ಕಾರ್ಮಿಕರ ಪರಿಸ್ಥಿತಿ ಇದರಿಂದ ತೀರಾ ಚಿಂತಾಜನಕವಾಗಿದೆ. ಯಾವ ಕೈಗಾರಿಕೆಯಲ್ಲೇ ಆಗಲಿ ವಿವಾದವು ಎದ್ದಾಗ ಅದು ಸಂಧಾನದ ಮೂಲಕವಾಗಿ ಇತ್ಯರ್ಥವಾಗದಿದ್ದ ಪಕ್ಷದಲ್ಲಿ, ಅದನ್ನು ಕೈಗಾರಿಕಾ ಪಂಚಾಯಿತಿಗೆ ಹಾಕುವಂತೆ ಮಾಡುವುದಂತೂ ಕಾರ್ಮಿಕ ಸಂಘಗಳಿಗೆ ಪ್ರಯಾಸದ ಕಾರ್ಯ. ತಿಂಗಳುಗಟ್ಟಲೆಯಾದರೂ ಅದು ಕೊಳೆಯುತ್ತಿರುತ್ತದೆ.

ಈ ರೀತಿಯಲ್ಲಿ ಎಲ್ಲಯೂ ವಿಧದಲ್ಲಿ ಸಹ ಸರಕಾರವು ಕಾರ್ಮಿಕ ವಿರೋಧಿ ನೀತಿಯನ್ನನುಸರಿಸುತ್ತಿರುವುದನ್ನು ಕಾಣಬಹುದಾಗಿದೆ.

ಆದರೆ ಎಚ್ಚೆತ್ತ ಕಾರ್ಮಿಕ ವರ್ಗ ಈ ಅಂಶಗಳನ್ನು ನೋಡುತ್ತ ಸುಮ್ಮನೆ ಕುಳಿತಿರದು. ಸರಕಾರದ ಈ ನೀತಿಯನ್ನು ಬದಲಿಸಲು, ಎದುರಿಸಲು ಹೋರಾಟ ನಡೆಸೇ ನಡೆಸುತ್ತದೆ ಮತ್ತು ಯಶಸ್ವಿಯೂ ಆಗುತ್ತದೆ. ಏಕೆಂದರೆ ಕಾರ್ಮಿಕ ಚಳವಳಿಯ ಇತಿಹಾಸದಲ್ಲಿ, ಸಣ್ಣ ರಿಯಾಯಿತಿಯಿಂದ ದೊಡ್ಡದರ ವರೆಗೆ ಎಲ್ಲವನ್ನೂ ಹೋರಾಟದಿಂದಲೇ ಪಡೆಯಲಾಗಿದೆ.

ಮೈಸೂರು ಸರಕಾರವು ಈ ಪರಿಸ್ಥಿತಿಯಲ್ಲಿ ತೂಕಡಿಸುವ ನೀತಿಯನ್ನನುಸರಿಸದೇ ಕೂಡಲೇ ಎಚ್ಚೆತ್ತು, ಸೂಕ್ತ ಕ್ರಮ ತೆಗೆದುಕೊಳ್ಳಲಿ ಎಂದು ಒತ್ತಾಯಪಡಿಸುತ್ತೇವೆ.

ಫೆಬ್ರುವರಿ 25ರಂದು ನಡೆಯಲಿರುವ ಪ್ರತಿಭಟನಾ ಹೋರಾಟವು ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ.

— —

ಬೆಂಗಳೂರು

ಸೋವಿಯತ್ ಪುಸ್ತಕ ಪ್ರದರ್ಶನ

ಮಾರ್ಚ್ ಮೊದಲನೆಯ ವಾರದಲ್ಲಿ ಭಾರತ—ರಷ್ಯ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ "ಸೋವಿಯತ್ ಪುಸ್ತಕ ಪ್ರದರ್ಶನ"ವು ನಡೆಯಲಿದೆ.

ಸೋವಿಯತ್ ರಷ್ಯಾದಲ್ಲಿ ಪ್ರಕಟವಾಗಿರುವ ಹೊತ್ತಗೆಗಳಷ್ಟೇ ಅಲ್ಲದೆ, ಭಾರತದಲ್ಲಿ ಪ್ರಕಟವಾಗಿರುವ ಹೊತ್ತಗೆಗಳೂ ಪ್ರದರ್ಶಿಸಲ್ಪಡುವುವು. ಪ್ರದರ್ಶನವನ್ನು ಟೌನ್ ಹಾಲ್ ಎದುರು ಇರುವ ನಿವೇಶನದಲ್ಲಿ ಏರ್ಪಡಿಸಲಾಗಿದೆ.

REG. No. M. 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore- 2 phone: 3810